ಸಂಪುಟ : 8 ಸಂಚಿಕೆ 308 ಪುಟ : 4 ಬೆಲೆ : 3.00 ಶನಿವಾರ ಜನವರಿ 20, 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 308 Pages : 4 Price : 3.00 Saturday JANUARY 20, 2024 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಗದಗ-ಬೆಟಗೇರಿ: ನೀರು ಪೂರೈಕೆಯಲ್ಲಿ ಎರಡು ದಿನ ವ್ಯತ್ಯಯ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ನಗರಸಭೆಯ ಸಗಟು ನೀರು ಸರಬರಾಜು ಮಾಡುವ ಪಾಪನಾಶಿಯ ಸಿಂಗಟರಾಯನ ಕೆರೆಯ ನೀರು ಶುದ್ಧೀಕರಣ ಘಟಕದಿಂದ ಗದಗ 'ಏ' ಪಾಯಿಂಟನ ಹಲವು ಭಾಗಗಳ ನೀರು ಪೂರೈಕೆಯ ಮುಖ್ಯ ಕೊಳವೆ ಮಾರ್ಗಗಳಲ್ಲಿ ದುರಸ್ತಿ ಇರುವುದರಿಂದ ದಿ. 20-1-2024 ಮತ್ತು 21.01.2024 ರಂದು ಎರಡು ದಿನಗಳ ಕಾಲ ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದ್ದು, ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸುವಂತೆ ಗದಗ-ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

## ಎಸ್.ಎಸ್.ಪಿ. ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ

■ ವಿಜಯಸಾಕ್ಷಿ ಸುದ್ದಿ, ಗದಗ

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯ ಕಾಲೇಜು ಹಾಗೂ ವಿವಿಧ ತಾಂತ್ರಿಕ ಕೋರ್ಸ್‌ಗಳಲ್ಲಿ ( (puc,Diploma, technical, professional courses Graduates ಮತ್ತು post graduates ಮತ್ತು professional courses Graduates ) ವ್ಯಾಸಂಗ ಮಾಡುತ್ತಿರುವ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್, ಬೌದ್ಧ ಮತ್ತು ಪಾರ್ಸಿ ವರ್ಗದವರು ಎಸ್.ಎಸ್.ಪಿ.ಶುಲ್ಕ ಮರುಪಾವತಿಗಾಗಿ ಮೆಟ್ರಿಕ್ ನಂತರದ ಹಾಗೂ ಮೆರಿಟ್ ಕಂ ಮೀನ್ಸ್ ವಿದ್ಯಾರ್ಥಿಗಳು https://ssp.karnataka.gov.in/ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಪ್ರಾರಂಭವಾಗಿದ್ದು, ಅರ್ಜಿ ಸಲ್ಲಿಸಲು 30-01-2024 ಕೊನೆಯದ್ದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಆಯಾ ತಾಲೂಕು ಮಾಹಿತಿ ಕೇಂದ್ರಗಳನ್ನೂ ಅಥವಾ ಹೆಲ್ಪ್‌ಲೈನ್ ನಂ:8277799990 ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಗದಗ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಮಹಾಯೋಗಿ ವೇಮನರ ಜಯಂತ್ಯುತ್ಸವ, ಮೂರ್ತಿ ಅನಾವರಣ ಕಾರ್ಯಕ್ರಮ ಉದ್ಘಾಟಿಸಿದ ಸಚಿವ ಎಚ್.ಕೆ. ಪಾಟೀಲ

# ವೇಮನ ಪೀಠದಿಂದ ಅಧ್ಯಯನ ಬೆಳೆಯಲಿ



■ ವಿಜಯಸಾಕ್ಷಿ ಸುದ್ದಿ, ಧಾರವಾಡ

ಮಹಾಯೋಗಿ ವೇಮನರ ಸಾಹಿತ್ಯ, ಸಂಶೋಧನೆ ಕುರಿತು ಹೆಚ್ಚಿನ ಸಂಶೋಧನೆಯ ಕಾರ್ಯಗಳಾಗಬೇಕು. ವೇಮನ ಅಧ್ಯಯನ ಪೀಠದಿಂದ ವಿದ್ಯಾರ್ಥಿ ನಿಲಯ ಸ್ಥಾಪಿಸಲು ಕವಿವಿಯಿಂದ ಪ್ರಸ್ತಾವನೆ ಸಲ್ಲಿಸಿದರೆ, ಸರಕಾರ ನೆರವಾಗಲಿದೆ ಎಂದು ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರಾದ ಎಚ್.ಕೆ. ಪಾಟೀಲ ನುಡಿದರು.

ಅವರು ಶುಕ್ರವಾರ ಮಧ್ಯಾಹ್ನ ಧಾರವಾಡದ ಕವಿವಿಯ ಮಹಾಯೋಗಿ ವೇಮನ ಪೀಠದಲ್ಲಿ ಆಯೋಜಿಸಿದ್ದ ಮಹಾಯೋಗಿ ವೇಮನರ ಜಯಂತ್ಯುತ್ಸವ ಹಾಗೂ ಮೂರ್ತಿ ಅನಾವರಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ವೇಮನರ ಸಂದೇಶಗಳನ್ನು ಜನಸಾಮಾನ್ಯರಿಗೆ ತಲುಪಿಸಲು ಮಹಾಯೋಗಿ ವೇಮನ ಪೀಠ ಹೆಚ್ಚು ಕ್ರಿಯಾಶೀಲವಾಗಿ ಕಾರ್ಯ ಮಾಡುತ್ತಿದೆ. ವೇಮನರ ಸಾಹಿತ್ಯ, ಸಂದೇಶಗಳ ಅನುವಾದ ಲೇಖಕಕರಾದ ಎಸ್.ಆರ್. ಪಾಟೀಲರ ವೇಮನ ಸಾಹಿತ್ಯ ಇಂದು ದಾರಿಯಾಗಿದೆ. ಕವಿವಿ ವೇಮನ ಪೀಠದಿಂದ ಜನಸಾಮಾನ್ಯರಿಗೆ ತಲುಪುವಂತೆ ವೇಮನರ ಜೀವನ ಸಂದೇಶಗಳನ್ನು ಸರಳವಾದ ಭಾಷೆಯಲ್ಲಿ, ಸಣ್ಣ ಪುಸ್ತಕಗಳನ್ನಾಗಿ ರಚಿಸಿ ವಿತರಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಗೌರವ ಉಪಸ್ಥಿತರಿದ್ದ ವಿ.ಪ ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, ಮಹಾಯೋಗಿ ವೇಮನ ಪೀಠವು ಕವಿವಿಯ ಇತರ ಪೀಠಗಳಿಗೆ ಮಾದರಿಯಾಗಿದೆ. ಹಿರಿಯ ಲೇಖಕ ಎಸ್.ಆರ್. ಪಾಟೀಲರು ತೆಲುಗು ಭಾಷಯಲ್ಲಿರುವ ಮಹಾಯೋಗಿ ವೇಮನರ ಸಾಹಿತ್ಯವನ್ನು ಕನ್ನಡಕ್ಕೆ ಭಾಷಾಂತರಿಸಿದ್ದರಿಂದ ಕನ್ನಡ ಸಾಹಿತ್ಯ ಮತ್ತು ಮಹಾಯೋಗಿ ವೇಮನರ ಶ್ರೀಮಂತ ಚರಿತ್ರೆ ಇಂದು ಮನೆಮಾತಾಗಿದೆ ಎಂದರು.

ಎರೆಹೊಸಳ್ಳಿಯ ಮಹಾಯೋಗಿ ವೇಮನ ಸಂಸ್ಥಾನಮಠ ರಡ್ಡಿ ಗುರುಪೀಠದ ವೇಮನಾನಂದ ಮಹಾಸ್ವಾಮಿಗಳು ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ, ಆಶೀರ್ವಚನ ನೀಡಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶಾಸಕರಾದ ಅರವಿಂದ ಬೆಲ್ಲದ, ಎನ್.ಎಚ್. ಕೋನರಡ್ಡಿ, ಪ್ರಕಾಶ ಕೋಳಿವಾಡ, ಮಾಜಿ ಶಾಸಕ ಡಿ.ಆರ್. ಪಾಟೀಲ, ಮಾಜಿ ಸಂಸದ ಪ್ರೊ. ಐ.ಜಿ. ಸನದಿ, ಕೆ.ಎಲ್. ಪಾಟೀಲ, ರಮೇಶ ಜಂಗಲ, ರಘುನಾಥ ಸಾಹುಕಾರ, ಜೆ.ಕೆ. ಜಮಾದಾರ, ಡಾ.ಗೋವಿಂದ ಮಣ್ಣೂರ, ರಘು ಲಕ್ಕಣ್ಣವರ ವೇದಿಕೆಯಲ್ಲಿದ್ದರು.

> ಮಹಾಯೋಗಿ ವೇಮನ ಪೀಠದಲ್ಲಿ ಸಂಶೋಧನೆ, ಅಧ್ಯಯನ ಬೆಳೆಯಬೇಕು. ಮುಂದಿನ ದಿನಗಳಲ್ಲಿ 50 ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ವಸತಿ ನಿಲಯ ಸ್ಥಾಪಿಸಲು ಸರಕಾರ ಸಹಕಾರ ನೀಡಲಿದೆ. ಬಸವಣ್ಣನವರ ಜಾತಿರಹಿತ ಸಮಾಜ ರಚನೆ ಅದ್ಭುತವಾಗಿತ್ತು. ಮನುಕುಲದ ಒಳಿತಿಗಾಗಿ ಬಸವಣ್ಣನವರು ಶ್ರಮಿಸಿದ್ದಾರೆ. ಬಸವಣ್ಣನವರು ಈಗ ಕರ್ನಾಟಕದ ಸಾಂಸ್ಕೃತಿಕ ರಾಯಭಾರಿ, ನಾಯಕ. ಅವರ ಚರಿತ್ರೆಯೇ ಕನ್ನಡ ನಾಡಿನ ಇತಿಹಾಸವಾಗಿದೆ ಎಂದು ಸಚಿವ ಎಚ್.ಕೆ. ಪಾಟೀಲ ತಿಳಿಸಿದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕವಿವಿ ಕುಲಪತಿ ಪ್ರೊ. ಕೆ.ಬಿ. ಗುಡಸಿ ಮಾತನಾಡಿದರು. ರಾಮದುರ್ಗದ ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿದ್ದಣ್ಣ ಲಂಗೋಟಿ ಮಹಾಯೋಗಿ ಶ್ರೀ ವೇಮನರ ಕುರಿತು ವಿಶೇಷ ಉಪನ್ಯಾಸ ನೀಡಿದರು. ಅತಿಥಿಗಳಾಗಿ ಕವಿವಿ ಮೌಲ್ಯಮಾಪನ ಕುಲಸಚಿವ ಡಾ.ಎನ್.ವೈ. ಮಟ್ಟಿಹಾಳ, ಸಿಂಡಿಕೇಟ್ ಮಾಜಿ ಸದಸ್ಯ ವಸಂತ ಲದ್ವಾ, ಡಾ. ಆರ್.ಸಿ. ಹಿರೇಮಠ, ಕನ್ನಡ ಅಧ್ಯಯನ ಪೀಠದ ವಿಶ್ರಾಂತ ಪ್ರಾಧ್ಯಾಪಕ ಡಾ. ಕೃ.ಅನ್ಬನ್, ಎಫ್.ಎಚ್. ಜಕ್ಕಪ್ಪನವರ, ಪ್ರತಾಪ ಚವ್ಹಾನ, ವಸಂತ ಅರ್ಕಾಚಾರಿ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.

ಕುಲಸಚಿವ ಎ.ಚನ್ನಪ್ಪ ಸ್ವಾಗತಿಸಿದರು. ಮಹಾಯೋಗಿ ವೇಮನ ಪೀಠದ ಸಂಯೋಜಕ ಡಾ. ಎಚ್.ಬಿ. ನೀಲಗುಂದ ಪ್ರಾಸ್ತಾವಿಕವಾಗಿ ಮಾತನಾಡಿದರು. ಉಮಾ ಅಂಕಲಗಿ ವೇಮನರ ಕುರಿತ ಭಕ್ತಿಗೀತೆಗಳನ್ನು ಪ್ರಸ್ತುತಪಡಿಸಿದರು. ಮಹಾಯೋಗಿ ವೇಮನ ಪೀಠದ ಅಧ್ಯಾಪಕರು, ವಿದ್ಯಾರ್ಥಿಗಳು, ರಡ್ಡಿ ಸಮುದಾಯದ ಪ್ರಮುಖರು, ಸಾರ್ವಜನಿಕರು ಉಪಸ್ಥಿತರಿದ್ದರು.

## ತೋಂಟದ ಶ್ರೀಗಳ ಸಂತಸ

■ ವಿಜಯಸಾಕ್ಷಿ ಸುದ್ದಿ, ಗದಗ

ಜಗತ್ತಿಗೆ ಅನುಭವಮಂಟಪದ ಮೂಲಕ ಪ್ರಪ್ರಥಮವಾಗಿ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಪರಿಚಯಿಸಿದ ಮಹಾಮಾನವತಾವಾದಿ, ಧರ್ಮಗುರು ಬಸವಣ್ಣನವರನ್ನು 'ಕರ್ನಾಟಕದ ಸಾಂಸ್ಕೃತಿಕ ನಾಯಕ' ಎಂಬ ನಿರ್ಣಯವನ್ನು ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ತಮ್ಮ ಸಚಿವ ಸಂಪುಟದ ಸಭೆಯಲ್ಲಿ ಸರ್ವಾನುಮತದಿಂದ ಕೈಗೊಂಡಿರುವುದು ಅಭಿನಂದನೀಯ ಸಂಗತಿ ಎಂದು ಗದಗ-ಡಂಬಳ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠದ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ತಮ್ಮ ಸಂತಸವನ್ನು ವ್ಯಕ್ತಪಡಿಸಿದ್ದಾರೆ.

ಶ್ರೀಮಠದ ಪ್ರಕಟಣೆಯಲ್ಲಿ ಈ ವಿಷಯ ತಿಳಿಸಿರುವ ಶ್ರೀಗಳು, ವಿಶ್ವಕ್ಕೆ ಸಮಾನತೆಯ ಸಂದೇಶ ಸಾರಿದ,



ಕಾಯಕ-ದಾಸೋಹ ತತ್ತ್ವಗಳ ಅಡಿಯಲ್ಲಿ ಸಮೃದ್ಧ ಹಾಗೂ ಸಂತೃಪ್ತ ರಾಷ್ಟ್ರ ನಿರ್ಮಾಣದ ಕನಸು ಕಂಡಿದ್ದ, ಕಾಯಕ ಜೀವಿಗಳನ್ನು ಸಂಘಟಿಸಿ ಶ್ರಮ ಸಂಸ್ಕೃತಿಗೆ ನಾಂದಿ ಹಾಡಿದ ಬಸವಣ್ಣನವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕರೆಂದು ಘೋಷಿಸಬೇಕೆಂಬುದು ನಾಡಿನ ಎಲ್ಲ ಮಠಾಧೀಶರ, ಪ್ರಗತಿಪರ ಚಿಂತಕರ ಹಾಗೂ ಸಮಸ್ತ ಜನಸಮುದಾಯದ ಆಶಯವಾಗಿತ್ತು. ಈ ಆಶಯಕ್ಕೆ ಮನ್ನಣೆ ನೀಡಿದ ಮುಖ್ಯಮಂತ್ರಿಗಳು ಬಸವಾದಿ ಶರಣರ ಚಿಂತನೆಗಳನ್ನು ನಾಡಿನ ಜನರ ಮನೆ ಮತ್ತು ಮನಗಳಿಗೆ ತಲುಪಿಸುವ ಯೋಜನೆಗಳನ್ನು ಹಾಕಿಕೊಳ್ಳುವುದಾಗಿ ತಿಳಿಸಿರುವುದು ನಾಡಿನ ಜನತೆಯ ಹರ್ಷಕ್ಕೆ ಕಾರಣವಾಗಿದೆ ಎಂದು ಶ್ರೀಗಳು ತಿಳಿಸಿದ್ದಾರೆ.

ಮುಂಬರುವ ಆಯ-ವ್ಯಯ ಪತ್ರಿಕೆಯನ್ನು ಮಂಡಿಸುವ ಸಂದರ್ಭದಲ್ಲಿ ಈ ಯೋಜನೆಗಳಿಗೆ ಮುಖ್ಯಮಂತ್ರಿಗಳು ವಿಶೇಷ ಅನುದಾನ ಒದಗಿಸಲಿ ಎಂದು ಶ್ರೀಗಳು ಪ್ರಕಟಣೆಯಲ್ಲಿ ಮುಖ್ಯಮಂತ್ರಿಗಳನ್ನು ಆಗ್ರಹಿಸಿದ್ದಾರೆ.

## ಸ್ಪರ್ಶ ಕುಷ್ಠರೋಗ ಜಾಗೃತಿ ಅಭಿಯಾನ

■ ವಿಜಯಸಾಕ್ಷಿ ಸುದ್ದಿ, ಗದಗ

ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನ ಕಾರ್ಯಕ್ರಮದಡಿಯಲ್ಲಿ ಸ್ಪರ್ಶ ಕುಷ್ಠರೋಗ ಜಾಗೃತಿ ಅಭಿಯಾನ-2023-24, ಜನೆವರಿ 30ರಿಂದ ಫೆಬ್ರುವರಿ 13ರವರೆಗೆ ಆಚರಿಸಲಾಗುತ್ತಿದೆ.

ಗದಗ ಜಿಲ್ಲೆಯ 39 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ, ನಗರದ 3 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹಾಗೂ 2 ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ, ಗ್ರಾಮ ಪಂಚಾಯಿತಿಗಳಲ್ಲಿ ಕುಷ್ಠರೋಗದ ಆರೋಗ್ಯ ಬಗ್ಗೆ ಶಿಕ್ಷಣ ನೀಡಲಾಗುತ್ತಿದೆ. ಜಿಲ್ಲೆಯ ಸಾರ್ವಜನಿಕರು ಕುಷ್ಠರೋಗದ ಆರಂಭಿಕ ಹಂತದ ಚಿಹ್ನೆಗಳಾದ ದೇಹದ ಮೇಲೆ ತಿಳಿ-ಬಿಳಿ ತಾಮ್ರ ವರ್ಣದ ಮಚ್ಚೆಗಳು ಹಾಗೂ ಮಚ್ಚೆಗಳಲ್ಲಿ ಸ್ಪರ್ಶ ಜ್ಞಾನ ಇಲ್ಲದಿರುವುದು, ಮಚ್ಚೆಗಳು ಇದ್ದ ಸ್ಥಳದಲ್ಲಿ ಕೂದಲು ಇಲ್ಲದಿರುವುದು ಮತ್ತು ಬೆವರು ಬಾರದೇ ಇರುವುದು, ಕೈ ಕಾಲುಗಳಲ್ಲಿ ಜೋಮು ಇರುವ ವ್ಯಕ್ತಿಗಳು ಹತ್ತಿರದ ಆರೋಗ್ಯ ಕೇಂದ್ರಗಳಿಗೆ ಭೇಟಿ ನೀಡಿ ಪರೀಕ್ಷೆಮಾಡಿಸಿಕೊಳ್ಳಬೇಕು.

ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಎಮ್.ಡಿಟಿ. ಚಿಕಿತ್ಸೆಯನ್ನು ನೀಡಲಾಗುತ್ತಿದ್ದು, ಸದರಿ ಕಾರ್ಯಮದ ಸದುಪಯೋಗ ಪಡೆದುಕೊಳ್ಳಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದೆ.

## ವೈದ್ಯಾಧಿಕಾರಿಗಳಿಗೆ ತರಬೇತಿ ಕಾರ್ಯಾಗಾರ




■ ವಿಜಯಸಾಕ್ಷಿ ಸುದ್ದಿ, ಗದಗ

ಎಸ್‌ಬಿಪಿಸಿ ಕಾರ್ಯಕ್ರಮದಡಿ ಹಾವು ಕಡಿತ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಕುರಿತು ವೈದ್ಯಾಧಿಕಾರಿಗಳಿಗೆ ಒಂದು ದಿನದ ತರಬೇತಿಯನ್ನು ಜಿಲ್ಲಾ ಸಮೀಕ್ಷಣಾ ಘಟಕದ ಕರುನಾಡು ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ. ಎಸ್.ಎಸ್. ನೀಲಗುಂದ ತರಬೇತಿ ಕಾರ್ಯಾ ಗಾರವನ್ನು ಉದ್ಘಾಟಿಸಿದರು. ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಡಾ. ಸುನೀಲ ಹಬೀಬ ತರಬೇತಿಯ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದರು. ಜಿಲ್ಲಾ ಅಸಾಂಕ್ರಾಮಿಕ ರೋಗಗಳ ಕಾರ್ಯಕ್ರಮ ಸಂಯೋಜಕ ಡಾ. ರವಿ ಕಡಗಾವಿ, ಜಿಲ್ಲಾ ಎಪಿಡೆಮಿ ಯೋಲಾಜಿಸ್ಟ್ ಡಾ. ಪ್ರವೀಣ ನಿಡಗುಂದಿ, ಮೈಕ್ರೋಬ ಯೋಲಾಜಿಸ್ಟ್ ಪ್ರತೀಕ್ ಹುರಕಡ್ಲಿ ಹಾಗೂ ಜಿಲ್ಲಾ ಸಮೀಕ್ಷಣಾ ಘಟಕದ ಸಿಬ್ಬಂದಿಗಳು ತರಬೇತಿಯಲ್ಲಿ ಪಾಲ್ಗೊಂಡಿದ್ದರು.

### ಆರ್‌ಎಎಫ್‌ನಿಂದ ಜಿಲ್ಲೆಯಲ್ಲಿ ರೂಟ್ ಮಾರ್ಚ್ । ಎಸ್‌ಪಿ ಬಿ.ಎಸ್. ನೇಮಗೌಡ ಮಾಹಿತಿ

# ಪೊಲೀಸ್ ಇಲಾಖೆಯಿಂದ ಸಂಪೂರ್ಣ ಬೆಂಬಲ



■ ವಿಜಯಸಾಕ್ಷಿ ಸುದ್ದಿ, ಗದಗ

ರ‍್ಯಾಪಿಡ್ ಆ್ಯಕ್ಷನ್ ಫೋರ್ಸ್‌ನಿಂದ ಜ.19ರಿಂದ 25ರವರೆಗೆ ಜಿಲ್ಲೆಯಾದ್ಯಂತ ರೂಟ್ ಮಾರ್ಚ್ ನಡೆಸಲು ಆರ್‌ಎಫ್ ತಂಡ ನಗರಕ್ಕೆ ಆಗಮಿಸಿದೆ. ಇದೊಂದು ವಿಶೇಷ ಕಾರ್ಯಕ್ರಮವಾಗಿದ್ದು, ಜಿಲ್ಲೆಯಾದ್ಯಂತ ಪ್ರಮುಖ ಸ್ಥಳಗಳಲ್ಲಿ ಸಂಚರಿಸಿ ಅಲ್ಲಿನ ಮಾಹಿತಿ ಪಡೆಯುವದು ಈ ರೂಟ್ ಮಾರ್ಚ್‌ನ ಉದ್ದೇಶವಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡ ತಿಳಿಸಿದರು.

ನಗರದ ಶಹರ ಪೊಲೀಸ್ ಠಾಣೆಯಲ್ಲಿ ಜರುಗಿದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಆರ್‌ಎಫ್ ತಂಡ ಇಲ್ಲಿನ ಸ್ಥಳ, ಇಲ್ಲಿನ ವಾತಾವರಣ, ಸಂಸ್ಕೃತಿಯ ಬಗ್ಗೆ ಮಾಹಿತಿ ಪಡೆಯಲು ಆಗಮಿಸಿದ್ದು, ಜಿಲ್ಲೆಯ ಪ್ರಮುಖ ನಗರ ಹಾಗೂ ಶಹರ ವ್ಯಾಪ್ತಿಯಲ್ಲಿ ಪಥ ಸಂಚಲನ ಜರುಗಿಸಲಾಗುವದು. ಆರ್‌ಎಫ್ ತಂಡಕ್ಕೆ ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿ ತಾವು ನಿರ್ವಹಿಸುವ ಸ್ಥಳ ಅಪರಿಚಿತ ಆಗಬಾರದು ಎನ್ನುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ತಂಡ-ಕ್ಕೆ ಗದಗ ಜಿಲ್ಲಾ ಪೊಲೀಸ್ ಇಲಾಖೆಯಿಂದ ಸಂಪೂರ್ಣ ಬೆಂಬಲ ನೀಡಲಾಗುವುದು ಎಂದರು.

ತಂಡದ ಅಸಿಸ್ಟಂಟ್ ಕಮಾಂಡೆಂಟ್ ಪ್ರದೀಪ್ ಡಿ.ಟಿ. ಮಾತನಾಡಿ, ಯಾವುದೇ ಒತ್ತಡಗಳಿಗೆ ಒಳಗಾಗದೇ ಇಲ್ಲಿನ ಜನರ ನಾಡಿಮಿಡಿತ, ಇಲ್ಲಿನ ಸಂಸ್ಕೃತಿ ತಿಳಿಯುವ ಹಾಗೂ ಜನರ ವಿಶ್ವಾಸ ಗಳಿಸುವ ಉದ್ದೇಶದೊಂದಿಗೆ ಈ ರೂಟ್ ಮಾರ್ಚ್‌ನ್ನು ಜರುಗಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಅಸಿಸ್ಟಂಟ್ ಕಮಾಂಡಂಟ್ ಬಿ.ಸಿ. ರಾಯ್, ಡಿ.ಎಸ್.ಪಿ. ವಿದ್ಯಾನಂದ ನಾಯಕ, ಸಿ.ಪಿ.ಐ. ಡಿ.ಬಿ. ಪಾಟೀಲ ಉಪಸ್ಥಿತರಿದ್ದರು.

ಪತ್ರಿಕಾಗೋಷ್ಠಿಯ ನಂತರ ಆರ್‌ಎಫ್ ತಂಡದಿಂದ ಶಹರ ಠಾಣೆಯಿಂದ ಪ್ರಾರಂಭವಾದ ರೂಟ್ ಮಾರ್ಚ್ ಡಿಸಿ ಮಿಲ್ ರೋಡ್, ಜವಳಗಲ್ಲಿ, ಕೆ.ಎಚ್. ಪಾಟೀಲ್ ಸರ್ಕಲ್, ಗಂಗಾಪುರ ಪೇಟೆ ಮಾರ್ಗವಾಗಿ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಕೊನೆಗೆ ಶಹರ ಠಾಣೆಗೆ ಬಂದು ಮುಕ್ತಾಯಗೊಂಡಿತು.

> 80 ಪುರುಷ ಹಾಗೂ 7 ಜನ ಮಹಿಳಾ ಸೈನಿಕರ ಆರ್‌ಎಎಫ್ ತಂಡ ಜಿಲ್ಲೆಗೆ ಆಗಮಿಸಿದೆ. ಈ ತಂಡವು ಜ.20ರಂದು ಲಕ್ಷ್ಮೇಶ್ವರ, ಮುಳಗುಂದ, ಜ.21ರಂದು ನರಗುಂದ, ಜ.22ರಂದು ಮುಂಡರಗಿ, ಜ.23ರಂದು ರೋಣ, ಗಜೇಂದ್ರಗಡ, ಜ.24ರಂದು ಶಿರಹಟ್ಟಿ, ಬೆಟಗೇರಿಗಳಲ್ಲಿ ರೂಟ್ ಮಾರ್ಚ್ ನಡೆಸಲಿದೆ. ಜ.25ರಂದು ಗದಗ ಪೊಲೀಸ್ ಹಾಗೂ ಸಿವಿಲ್ ಪೊಲೀಸ್ ನಡುವೆ ವ್ಹಾಲಿಬಾಲ್ ಪಂದ್ಯಾವಳಿ ನಡೆಯಲಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡ ಮಾಹಿತಿ ನೀಡಿದರು.

### ನಗರಸಭೆಯಲ್ಲಿ ದುರಾಡಳಿತ । ಜಿಲ್ಲಾಧಿಕಾರಿಗಳ ಮಧ್ಯಪ್ರವೇಶಕ್ಕೆ ಎಲ್.ಡಿ. ಚಂದಾವರಿ ಆಗ್ರಹ

# ಅಧ್ಯಕ್ಷ ಸ್ಥಾನಕ್ಕೆ ತಕ್ಷಣವೇ ರಾಜೀನಾಮೆ ನೀಡಿ




■ ವಿಜಯಸಾಕ್ಷಿ ಸುದ್ದಿ, ಗದಗ

ನಗರಸಭೆಯಲ್ಲಿ ಬಿಜೆಪಿ ದುರಾಡಳಿತ ನಡೆಸುತ್ತಿದೆ. ಬೀದಿ ದೀಪಗಳ ನಿರ್ವಹಣೆ, ಕುಡಿಯುವ ನೀರಿನ ಅವ್ಯವಸ್ಥೆ, ಸಮಸ್ಯೆ ಹೊತ್ತು ಬಂದ ಸಾರ್ವಜನಿಕರ ಕೆಲಸವಾಗುತ್ತಿಲ್ಲ. ಹೀಗಾಗಿ ನಗರಸಭೆ ಅಧ್ಯಕ್ಷೆ ಉಷಾ ದಾಸರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ನಗರಸಭೆ ಪ್ರತಿಪಕ್ಷ ನಾಯಕ ಎಲ್. ಡಿ. ಚಂದಾವರಿ ಆಗ್ರಹಿಸಿದರು.

ಶುಕ್ರವಾರ ಪತ್ರಿಕಾಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಡಳಿತ ವೈಫಲ್ಯದಿಂದ ಜಿಲ್ಲಾಡಳಿತವೇ ನಗರಸಭೆಯ ಎಲ್ಲ ನಿರ್ಣಯಗಳನ್ನು ಕೈಗೊಳ್ಳುತ್ತಿದೆ. ನಗರಸಭೆ ಎಂಬುದು ಧರ್ಮಶಾಲಾ ಇದ್ದಂತೆ ಕಾಣುತ್ತಿದೆ ಎಂದು ಆರೋಪಿಸಿದರು.

ಬೆಳೆಯುತ್ತಿರುವ ನಗರಗಳಲ್ಲಿ ಮೂಲಭೂತ ಸೌಕರ್ಯಗಳೇ ಇಲ್ಲ. ಬಜೆಟ್ ಕುರಿತು ಶೀಘ್ರದಲ್ಲೇ ಸಭೆ ಜರುಗಲಿದೆ. ಈ ಬಗ್ಗೆ ಪೂರ್ವಭಾವಿ ಚರ್ಚೆಯೇ ಇಲ್ಲ. ನೀರು ಪೂರೈಕೆ ಸಲಕರಣೆಗೆ ಖರೀದಿಗೂ ಕೋಟಿ ಮೊತ್ತದ ವಸ್ತುಗಳ ಖರೀದಿ ಮಾಡಲಾಗಿದೆ. ಅವುಗಳ ಸಮರ್ಪಕ ಬಳಕೆ ಆಗುತ್ತಿಲ್ಲ. ನಗರಸಭೆ ಅಧ್ಯಕ್ಷರು 15 ದಿನಗಳಿಗೆ ಒಮ್ಮೆ ಕಚೇರಿಗೆ ಬರುತ್ತಾರೆ. ಪೌರಾಯುಕ್ತರು ಕಳೆದ 15 ದಿನಗಳಿಂದ ನಗರಸಭೆಗೆ ಆಗಮಿಸಿಲ್ಲ. ಹೀಗಾದರೆ ಅಭಿವೃದ್ಧಿ ಆಗುವುದು ಹೇಗೆ ಎಂದು ವ್ಯಂಗ್ಯವಾಡಿದರು.

ಬಿಜೆಪಿ ಆಡಳಿತಕ್ಕೆ ಬಂದು ಎರಡು ವರ್ಷ ಕಳೆದರೂ ಸಾಧನೆ ಶೂನ್ಯ. ಜನರ ನಿರೀಕ್ಷೆ ಪೂರೈಸಲು ಬಿಜೆಪಿ ವಿಫಲವಾಗಿದೆ. ಹಾಗಾಗಿ ಅಧ್ಯಕ್ಷರು ರಾಜೀನಾಮೆ ನೀಡಬೇಕು.

▶▶ 3ನೇ ಪುಟಕ್ಕೆ

**ಪಿಇ ಟೀಚರ್ ಸಂದರ್ಶನದಲ್ಲಿ ಭ್ರಷ್ಟಚಾರ..? ಲೋಕಾಯುಕ್ತರು ತನಿಖೆ ನಡೆಸಲಿ**

ನಗರಸಭೆ ಹೈಸ್ಕೂಲ್‌ನ ಪಿಇ ಹುದ್ದೆಗೆ ಸಂದರ್ಶನದಲ್ಲಿ 40 ಲಕ್ಷ ಅವ್ಯಹಾರ ಜರುಗಿದೆ. ಸಂದರ್ಶನ ಕರೆಯುವ ಅಧಿಕಾರ ಪ್ರಿನ್ಸಿಪಾಲ್‌ಗೆ ಇದೆ. ಆದರೆ, ನಗರಸಭೆ ಅಧ್ಯಕ್ಷ ಮತ್ತು ಪೌರಾಯುಕ್ತರು ಸಂದರ್ಶನ ಕರೆದಿದ್ದಾರೆ. ಇದು ಕಾನೂನು ಬಾಹಿರ. ಪ್ರಿನ್ಸಿಪಾಲ್ ಅವರನ್ನು ಹೊರಗಿಟ್ಟು ಸಂದರ್ಶನ ನಡೆಸಲಾಗಿದೆ. ಸಂದರ್ಶನ ನೋಟಿಫಿಕೇಷನ್‌ಲ್ಲಿ ಎಂ.ಪಿ ಎಡ್ ಶೇ.55 ಅಂಕ ಪಡೆದರೆ ಸಾಕು ಎಂದು ತಿಳಿಸಲಾಗಿದೆ. ಆದರೆ, ಮೆರಿಟ್ ಮೇಲೆ ನೇಮಕ ಮಾಡಬೇಕು ಎನ್ನುವ ನಿಯಮವಿದೆ. ಇಲ್ಲಿ ಸರ್ಕಾರದ ನಿಯಮ ಉಲ್ಲಂಘನೆ ಆಗಿದೆ. ಸಂದರ್ಶನ ಕರೆಯುವ ಪೂರ್ವದಲ್ಲಿ ಸಾಮಾನ್ಯ ಸಭೆಯಲ್ಲಿ ಠರಾವು ಮೂಲಕ ಸಂದರ್ಶನ ವಿಷಯಕ್ಕೆ ಅನುಮೋದನೆ ಪಡೆದಿಲ್ಲ. ಹೈಸ್ಕೂಲ್ ಕಮಿಟಿ, ಸಾಮಾನ್ಯ ಸಭೆ ಅನುಮತಿ ಇಲ್ಲದೇ ಸಂದರ್ಶನ ನಡೆದ ಪ್ರಕ್ರಿಯೆ ಅಕ್ರಮವಾಗಿದೆ. 7 ಜನ ಸಂದರ್ಶನಕ್ಕೆ ಬಂದ ಜನರಲ್ಲಿ ಹಲವರು ಹೆಚ್ಚಿನ ಅಂಕ ಪಡೆದಿದ್ದಾರೆ. ಅರ್ಹರಿಗೆ ನ್ಯಾಯ ದೊರೆತಿಲ್ಲ. ಈ ವಿಷಯದಲ್ಲಿ ವಂಚನೆ, ಅಪರಾಧ, ಭ್ರಷ್ಟಾಚಾರ ನಡೆಸಿದೆ. ಲೋಕಾಯುಕ್ತರು ಸ್ವಯಂ ದೂರು ದಾಖಲಿಸಿಕೊಂಡು ತನಿಖೆ ನಡೆಸಬೇಕು. ಉನ್ನತ ಶಿಕ್ಷಣ ಇಲಾಖೆ ಈ ನೇಮಕಾತಿ ಪ್ರಕ್ರಿಯೆಯನ್ನು ಸಂಪೂರ್ಣ ಸ್ಥಗಿತಗೊಳಿಸಬೇಕು ಎಂದು ಎಲ್.ಡಿ ಚಂದಾವರಿ ಆಗ್ರಹಿಸಿದರು.

## ಸಂಪಾದಕೀಯ

# ಸಮಾನತೆಯ ಹರಿಕಾರನಿಗೆ ಸಾಂಸ್ಕೃತಿಕ ರಾಯಭಾರಿ ಪಟ್ಟ

ಜಗತ್ತಿಗೆ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಪರಿಚಯಿಸಿದ ಸಮಾನತೆಯ ಹರಿಕಾರ, ವಿಚಾರಕ್ರಾಂತಿಯ ಕಹಳೆ ಮೊಳಗಿಸಿದ ಬಸವಣ್ಣನಿಗೆ ಸಾಂಸ್ಕೃತಿಕ ರಾಯಭಾರಿ ಪಟ್ಟ ಕಟ್ಟಲಾಗಿದೆ. ರಾಜ್ಯ ಸರ್ಕಾರದ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಸರ್ವಾನುಮತದ ನಿರ್ಧಾರ ಕೈಗೊಂಡಿದ್ದು, ಬಸವ ಭಕ್ತರ ಸಂಭ್ರಮ ಇಮ್ಮಡಿಗೊಂಡಿದೆ.

ಈ ಕುರಿತು ಅಧಿಕೃತ ಮಾಹಿತಿ ನೀಡಿದ ಕಾನೂನು ಸಚಿವ ಎಚ್ ಕೆ ಪಾಟೀಲ್, ಸಚಿವ ಸಂಪುಟದ ಸರ್ವಾನುಮತದ ನಿರ್ಣಯ ಕೈಗೊಂಡಿದ್ದು, ಭವಿಷ್ಯದಲ್ಲಿ ಬಸವಣ್ಣನ ವಿಚಾರಧಾರೆಗಳನ್ನ ಜನಮಾನಸಕ್ಕೆ ತಲುಪಿಸುವ ಚಿಂತನೆಯೊಂದಿಗೆ ಸಾಂಸ್ಕೃತಿಕ ನಾಯಕನ ಘೋಷಣೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ತಡವಾಗಿಯಾದರೂ, ಬಸವಣ್ಣನಿಗೆ ಸರ್ಕಾರದಿಂದ ಸಲ್ಲಬೇಕಾದ ಗೌರವವನ್ನು ಅರ್ಪಣೆ ಮಾಡಿದೆ. ಜಾತಿ, ವರ್ಣ, ವರ್ಗ ರಹಿತ ಸಮಾಜದ ಕನಸು ಕಂಡಿದ್ದ ಬಸವಣ್ಣನ ಆಶಯಗಳು ಇಂದು ಅತಿ ಹೆಚ್ಚು ಪ್ರಸ್ತುತವಾಗಿದೆ.

ಜಾತಿ ಆಧಾರಿತ ರಾಜಕಾರಣದಿಂದಾಗಿ ದೇಶದಲ್ಲಿ ಕೋಮು ಸೌಹಾರ್ದತೆಗೆ ಘಾಸಿಯಾಗಿದೆ. ಇಂತಹ ವಿಷಮ ಸ್ಥಿತಿಯಲ್ಲಿ ಬಸವಣ್ಣನಿಗೆ ಸಾಂಸ್ಕೃತಿಕ ರಾಯಭಾರಿಯನ್ನಾಗಿ ಮಾಡಿರುವುದು ಅತ್ಯಂತ ಸ್ವಾಗತಾರ್ಹ ನಡೆಯಾಗಿದೆ.

ಈ ಹಿಂದಿನ ಕಾಂಗ್ರೆಸ್ ಸರ್ಕಾರದಲ್ಲಿ ವೀರಶೈವ ಲಿಂಗಾಯತ ವಿಷಯವಾಗಿ ಕೈಗೊಂಡ ನಿರ್ಧಾರಗಳಿಂದಾಗಿ ಪಕ್ಷದ ಬೆಳವಣಿಗೆಗೆ ವ್ಯತಿರಿಕ್ತವಾದ ಪರಿಣಾಮ ಬೀರಿದ್ದವು. ವೀರಶೈವ ಲಿಂಗಾಯತರ ಕಂಗಣ್ಣಿಗೂ ಕಾಂಗ್ರೆಸ್ ನಾಯಕರು ಗುರಿಯಾಗಿದ್ದರು. ಸದ್ಯ ಬಸವಣ್ಣನನ್ನ ನಾಡಿನ ಸಾಂಸ್ಕೃತಿಕ ನಾಯಕನಾಗಿ ಘೋಷಣೆ ಮಾಡಿರುವುದರಿಂದ, ಈ ಹಿಂದೆ ಆದ ಪ್ರಮಾದದ ಪರಿಣಾಮವನ್ನ ಒಂದಷ್ಟು ಕಡಿಮೆ ಮಾಡಿಕೊಂಡಂತಾಗಿದೆ.

ಏನೇ ಆಗಲಿ, ಬಸವಣ್ಣ ಕನ್ನಡ ನಾಡಿನ ಸಾಕ್ಷಿಪ್ರಜ್ಞೆ, ಶೋಷಿತರ ಧ್ವನಿ. ಸಮಾನತೆಗಾಗಿ ಶ್ರಮಿಸಿದ ಸಂತ, ಮಹಿಳಾ ಸ್ವಾತಂತ್ರ್ಯವನ್ನ ಪ್ರತಿಪಾದಿಸಿದ ಮೊಟ್ಟ ಮೊದಲ ನಾಯಕ. ಅಂತಹ ಮಹಾನ್ ವಿಶ್ವಗುರುವಿಗೆ ಸರ್ಕಾರ ನಮನವನ್ನ ಸಲ್ಲಿಸುವ ಕೆಲಸ ಮಾಡಿರುವುದು ಅತ್ಯಂತ ಯೋಗ್ಯವಾಗಿದೆ.

### ಅಯೋಧ್ಯೆಯ ಶ್ರೀರಾಮ ಮಂದಿರದ ಕರಸೇವೆಯಲ್ಲಿ ಗದುಗಿನ ಕಾರ್ಯಕರ್ತರ ಕೈಂಕರ್ಯ

# ಇತಿಹಾಸದ ಪುಟ ಸೇರಿದ ಹೋರಾಟ

ಶ್ರೀರಾಮನ ಜನ್ಮಸ್ಥಳವಾದ ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ ಆಗಬೇಕೆಂಬ ಹಿಂದೂಗಳ ಒತ್ತಾಸೆಗೆ ಕೈ ಜೋಡಿಸುವ ಮೂಲಕ ಕರಸೇವೆಗೈದು, ಹೋರಾಟ, ತ್ಯಾಗ, ಬಲಿದಾನದೊಂದಿಗೆ ಟೊಂಕಕಟ್ಟಿ ನಿಂತಿದ್ದು ವಿಶ್ವ ಹಿಂದೂ ಪರಿಷತ್ (ವ್ಹಿಎಚ್‌ಪಿ). ಬಿಜೆಪಿ ಮತ್ತು ವ್ಹಿಎಚ್‌ಪಿ ರಾಷ್ಟ್ರೀಯ, ರಾಜ್ಯ ನಾಯಕರು, ಧುರೀಣರು, ಕಾರ್ಯಕರ್ತರು ಒಗ್ಗಟ್ಟನ್ನು ಪ್ರದರ್ಶಿಸಿ ಸಾಕಾರಗೊಳಿಸಿದ ಹಿಂದಿನ ಎಲ್ಲ ಘಟನೆಗಳು ಇತಿಹಾಸದ ಪುಟ ಸೇರಿವೆ.

1990ರ ನವರಾತ್ರಿಯಲ್ಲಿ ಸೋಮನಾಥದಿಂದ ಆರಂಭವಾದ ಪಯಣದ ಫಲವಾಗಿ ಇಂದು ಬಿಜೆಪಿ ದೇಶದ ಅತಿ ದೊಡ್ಡ ರಾಜಕೀಯ ಪಕ್ಷವಾಗಿದೆ. ರಾಜಿಯಿಲ್ಲದ ರಾಷ್ಟ್ರವಾದಿ ನೇತೃತ್ವದ, ಬೆರಳೆಣಿಕೆಯಷ್ಟು ರಾಷ್ಟ್ರವಾದಿಗಳ ನೇತೃತ್ವದಲ್ಲಿ ಆರಂಭವಾದ ಪಥಸಂಚಲನ ಇಂದು ರಾಷ್ಟ್ರೀಯತೆಯ ಕಿಚ್ಚು ಹೊತ್ತಿಸಿದೆ. ರಾಮ್ ಲಲ್ಲಾ ತನ್ನ ಜನ್ಮದ ಪವಿತ್ರ ಸ್ಥಳವನ್ನು ಸ್ಮರಿಸುವ ದೇವಾಲಯದಲ್ಲಿ ತನ್ನ ಸರಿಯಾದ ಸ್ಥಳವನ್ನು ಕಂಡುಕೊಂಡಿದೆ.

ಪಂಡಿತ್ ದೀನದಯಾಳ್ ಉಪಾಧ್ಯಾಯ ಅವರ ಜನ್ಮದಿನವಾದ ಸೆಪ್ಟೆಂಬರ್ 25, 1990ರಂದು ಸೋಮನಾಥದಿಂದ ರಾಮ ರಥಯಾತ್ರೆ ಪ್ರಾರಂಭವಾಯಿತು ಮತ್ತು 10 ಸಾವಿರ ಕಿಮೀ ಕ್ರಮಿಸಿದ ನಂತರ ಅಕ್ಟೋಬರ್ 30ರಂದು ಅಯೋಧ್ಯೆಯಲ್ಲಿ ಮುಕ್ತಾಯಗೊಳ್ಳಬೇಕಿತ್ತು. ಶ್ರೀ ಎಲ್.ಕೆ.ಅಡ್ವಾಣಿ ಅವರನ್ನು ಅಕ್ಟೋಬರ್ 23ರಂದು ಮುಂಜಾನೆ ಬಿಹಾರದ ಸಮಸ್ತಿಪುರದಲ್ಲಿ ಬಂಧಿಸಲಾಯಿತು ಮತ್ತು ಮಸಂಜೋರ್‌ನಲ್ಲಿ ಬಂಧಿಯಾದರು. ಈ ಬಂಧನದ ಕಾರಣದಿಂದಾಗಿ ಸಿಡಿದೆದ್ದ ವ್ಹಿಎಚ್‌ಪಿ ಅಡ್ವಾಣಿ ಬಿಡುಗಡೆಗೆ ಆಗ್ರಹಿಸಿ ದೇಶದಾದ್ಯಂತ ಪ್ರತಿಭಟನೆ ಹೋರಾಟ ನಡೆಸಲು ಕರೆ ನೀಡಿತು.

ವ್ಹಿಎಚ್‌ಪಿ ಕರೆಯ ಮೇರೆಗೆ ಗದುಗಿನ ಮಹಾತ್ಮಾ ಗಾಂಧಿ ಸರ್ಕಲ್ ಬಳಿ ಬಿಜೆಪಿ ಧುರೀಣರು, ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಪೊಲೀಸರು ಪ್ರತಿಭಟನೆ ಕೈಗೊಂಡ 129ಕ್ಕೂ ಹೆಚ್ಚು ಬಿಜೆಪಿ ಕಾರ್ಯಕರ್ತರನ್ನು ಬಂಧಿಸಿ ಧಾರವಾಡದ ಬಾಲಅಪರಾಧ ಶಾಲೆಯಲ್ಲಿ ಒಂದು ವಾರ ಬಂಧಿಸಿಟ್ಟರು.

ಮುಂದೆ 1992ರಲ್ಲಿ ಅಯೋಧ್ಯೆಯಲ್ಲಿ ಶ್ರೀರಾಮ ಜನ್ಮ ಭೂಮಿಯಲ್ಲಿ ನಡೆದ ಕರಸೇವೆಗೆ ವಿಶ್ವ ಹಿಂದೂ ಪರಿಷತ್ ಕರೆಯ ಮೇರೆಗೆ ಗದುಗಿನಿಂದ ಅಯೋಧ್ಯೆಗೆ ಹಲವಾರು ಕಾರ್ಯಕರ್ತರು ತೆರಳಿದ್ದರು. ಶ್ರೀಕಾಂತ ಖಟವಟೆ, ವಿಠ್ಠಲಸಾ ಭಾಂಡಗೆ, ಪ್ರಕಾಶ ಎಚ್.ಭಾಂಡಗೆ, ಸುರೇಶ ಎಲ್.ಪವಾರ, ಬಸವರಾಜ ಗುಡಿಸಾಗರ, ರಾಮು ನಿಂಬಾಳ್ಕರ್, ಲಕ್ಷ್ಮಣ ಗುಜ್ಜರ ಇವರನ್ನು ಒಳಗೊಂಡ ತಂಡವು ರೈಲು ಮೂಲಕ ಅಲಹಾಬಾದ್‌ಗೆ ತೆರಳಿತು.

ಅಯೋಧ್ಯೆಗೆ ಆಗಮಿಸಿದ್ದ ಕರಸೇವಕರಿಗೆ ಉತ್ತರ ಪ್ರದೇಶದ ಶರ್ಮಾ, ಗುಪ್ತಾ, ಮೆಹತಾ ಕುಟುಂಬದವರು ಉಪಹಾರ, ಊಟದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಿದ್ದರು. ಬಿಜೆಪಿಯ ರಾಷ್ಟ್ರೀಯ ನಾಯಕ ಎಲ್.ಕೆ. ಅಡ್ವಾಣಿ, ಕಲ್ಯಾಣಸಿಂಗ್ ಸೇರಿದಂತೆ ರಾಷ್ಟ್ರೀಯ ಮತ್ತು ರಾಜ್ಯ ಬಿಜೆಪಿ ಹಾಗೂ ವ್ಹಿ.ಎಚ್‌ಪಿ ಯ ನಾಯಕರು, ಪ್ರಮುಖರು, ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. 1992 ಡಿಸೆಂಬರ್ 6ರಂದು ಮಧ್ಯಾಹ್ನ 12 ಗಂಟೆಯ ಸುಮಾರಿಗೆ ಕರಸೇವಕರ ಗುಂಪೊಂದು ಬಾಬರಿ ಮಸೀದಿಯ ಗುಮ್ಮಟವನ್ನು ಧ್ವಂಸಗೊಳಿಸಿತು. ಏತನ್ಮಧ್ಯೆ ಗೋಡೆ ಕುಸಿದು ಹಲವರು ಸಾವನ್ನಪ್ಪಿದರು. ಪ್ರಕ್ಷುಬ್ಧ ಪರಿಸ್ಥಿತಿಯನ್ನು ನಿಯಂತ್ರಿಸಲು ಸೇನಾಪಡೆ ಸ್ಥಳಕ್ಕೆ ಬರುತ್ತಿದ್ದಂತೆಯೇ ಕಾರ್ಯಕರ್ತರು ಚದುರಿ ಹೊರನಡೆದರು. ಹಾಗೇ ಗದುಗಿನ ಶ್ರೀಕಾಂತ ಖಟವಟೆ ಅವರ ತಂಡ ರೈಲು ಮುಖಾಂತರ ಕೊಲ್ಲಾಪೂರಕ್ಕೆ ಬಂದು ಅಲ್ಲಿಂದ ಗದುಗಿಗೆ ಆಗಮಿಸಿತು.

ಇನ್ನೊಂದು ತಂಡವು ಗದುಗಿನ ಶ್ರೀಪತಿ ಉಡುಪಿ ಅವರ ನೇತೃತ್ವದಲ್ಲಿ ರಾಣೆಬೆನ್ನೂರಿನ ಪ್ರಶಾಂತ ಕುಲಕರ್ಣಿ, ಪ್ರಕಾಶ ಹಿರೇಮಠ, ಗಜೇಂದ್ರಗಡದ ರಂಗ್ರೇಜ್ ಮುಂತಾದವರೂ ಅಯೋಧ್ಯೆಗೆ ತೆರಳಿದ್ದರು. ಅಯೋಧ್ಯೆಯ ಶ್ರೀರಾಮ ಮಂದಿರದ ಕರಸೇವೆಯಲ್ಲಿ ಗದುಗಿನ ಬಿಜೆಪಿ–ವ್ಹಿಎಚ್‌ಪಿಯ ಕೈಂಕರ್ಯವೂ ಇದೆ ಎಂಬುದನ್ನು ಈ ಸಂದರ್ಭದಲ್ಲಿ ನೆನೆಯಲೇಬೇಕಿದೆ.

**–ಸುಧೀರಸಿಂಹ ಘೋರ್ಪಡೆ.**
ಮಾಜಿ ಸೈನಿಕ, ನ್ಯಾಯವಾದಿ, ಗದಗ.



ಆಗಿನ ಬಿಜೆಪಿಯ ಹಿರಿಯ ಧುರೀಣರಾಗಿದ್ದ ಡಾ. ಆರ್.ಎ. ಜಾಲಿಹಾಳ, ಶ್ರೀಕಾಂತ ಖಟವಟೆ, ತೋಟೋಸಾ ಭಾಂಡಗೆ, ನೇನಮಲ್ಲಜೀ ಬನ್ಸಾಲಿ, ರಾಜಾರಾಮ ಕಾಂಬಳೇಕರ, ವಿಠ್ಠಲಸಾ ಭಾಂಡಗೆ, ಕೃಷ್ಣಾ ಹೊಂಬಾಳಿ, ಜಗನ್ನಾಥಸಾ ಭಾಂಡಗೆ, ಬಸವರಾಜ ಬೆಳಧಡಿ, ಮಾರುತಿ ಪವಾರ ಮುಂತಾದ ಪ್ರಮುಖರು ಸೇರಿದಂತೆ ಒಟ್ಟು 129 ಜನರನ್ನು ಬಂಧಿಸಲಾಯಿತು. ಹೀಗೆ ಬಂಧಿತರಾದವರಲ್ಲಿ ಕರ್ನಾಟದಲ್ಲಿ ಗದುಗಿನ ಕಾರ್ಯಕರ್ತರ ಸಂಖ್ಯೆಯೇ ಹೆಚ್ಚು. ಬಂಧಿತರನ್ನು ಜಾಮೀನಿನ ಮೇಲೆ 6 ದಿನಗಳ ಬಳಿಕ ಬಿಡುಗಡೆ ಮಾಡಲಾಯಿತು.

### ಖುಷಿ–ಸಂತೃಪ್ತಿ ತಂದಿದೆ

ಶ್ರೀರಾಮ ಮಂದಿರ ನಿರ್ಮಾಣಕ್ಕೆ ಕರಸೇವೆಯ ಅವಕಾಶ ಸಿಕ್ಕಿದ್ದು ಪೂರ್ವಜನ್ಮದ ಪುಣ್ಯ. ಶ್ರೀರಾಮನ ಕೃಪೆಯಿಂದ ಬದುಕಿ ಗದುಗಿಗೆ ಹಿಂದಿರುಗಿ ಬಂದಿದ್ದೇವೆ. ರಾಮ ಮಂದಿರ ನಿರ್ಮಾಣಗೊಂಡಿದ್ದು ಅತ್ಯಂತ ಖುಷಿ, ಸಂತೃಪ್ತಿ ತಂದಿದೆ.


**– ಶ್ರೀಕಾಂತ ಖಟವಟೆ.**
ಬಿಜೆಪಿ–ವ್ಹಿಎಚ್‌ಪಿ ಪ್ರಮುಖ, ಗದಗ.

# ಮುಸ್ಲಿಂ ಮಹಾಸಭಾ ಗದಗ ಜಿಲ್ಲಾ ಯುವ ಅಧ್ಯಕ್ಷರ ನೇಮಕ

**■ವಿಜಯಸಾಕ್ಷಿ ಸುದ್ದಿ, ಗದಗ**

ಅಖಿಲ ಕರ್ನಾಟಕ ಮುಸ್ಲಿಂ ಮಹಾಸಭಾದ ಗದಗ ಜಿಲ್ಲಾ ಯುವ ಘಟಕದ ಅಧ್ಯಕ್ಷರನ್ನಾಗಿ ಇಂಜಿನಿಯರಿಂಗ್ ಪದವೀಧರಾದ ಯಾಸಿನ್ ಅಬ್ದುಲ್ ಮುನಾಫ್ ಮುಲ್ಲಾ ಇವರನ್ನು ರಾಜ್ಯಾಧ್ಯಕ್ಷರಾದ ಮಹ್ಮದ್‌ಶಫಿಮುದ್ದೀನ್ ಎಸ್.ನಾಗರಕಟ್ಟಿರವರು ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

ಶ್ರೀಯುತರು ಗದಗ ಜಿಲ್ಲೆಯ ಮುಸ್ಲಿಂ ಸಮುದಾಯದ ಯುವಕರನ್ನು ಸಂಘಟಿಸಿ, ಅವರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ರಾಜಕೀಯವಾಗಿ ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಶ್ರಮ ವಹಿಸಬೇಕೆಂದು ಆದೇಶಿಸಿದ್ದಾರೆ. ಮುಂಬರುವ ದಿನಗಳಲ್ಲಿ ಮುಸ್ಲಿಂ ಸಮುದಾಯದ ಯುವಕರ ಭವಿಷ್ಯವು ಉಜ್ವಲವಾಗುವಲ್ಲಿ ಮತ್ತು ದೇಶದ ಪ್ರಗತಿಯಲ್ಲಿ ಪ್ರಮುಖ ಪಾತ್ರ ವಹಿಸುವಂತೆ ಕಾರ್ಯಪ್ರವೃತ್ತರಾಗಬೇಕೆಂದು ಆಶಿಸಿದ್ದಾರೆ.



# ಅಯೋಧ್ಯಾ ಶ್ರೀರಾಮ ಮಂದಿರ ಮಂತ್ರಾಕ್ಷತೆ ವಿತರಣೆ



**■ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ**

ಇಲ್ಲಿಯ ವಿಶ್ವ ಹಿಂದೂ ಪರಿಷತ್ ಹಾಗೂ ಭಜರಂಗದಳದ ಕಾರ್ಯಕರ್ತರು ಅಯೋಧ್ಯೆ ರಾಮ ಮಂದಿರದ ಪ್ರಾಣ ಪ್ರತಿಷ್ಠಾಪನೆಯ ಮಂತ್ರಾಕ್ಷತೆಯನ್ನು ಗ್ರಾಮದ ಮನೆ ಮನಗೆ ತೆರಳಿ ವಿತರಿಸಿದರು.

ಗ್ರಾಮದ ಅಗಸಿ ಮಾರುತಿ ದೇವಸ್ಥಾನದಲ್ಲಿ ಮಾರುತಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ, ಭಕ್ತಿ ಭಾವದಿಂದ ಕಾರ್ಯಕರ್ತರು ನಮನ ಸಲ್ಲಿಸಿದರು. ನಂತರ ಗ್ರಾಮದ ಸುಮಾರು 3500 ಕಟುಂಬಗಳಿಗೆ ಮಂತ್ರಾಕ್ಷತೆಯನ್ನು ತಲುಪಿಸಿ ಶ್ರೀರಾಮನ ಕೃಪೆಗೆ ಪಾತ್ರರಾಗಬೇಕೆಂದು ಪ್ರಾರ್ಥಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ವಿಶ್ವ ಹಿಂದೂ ಪರಿಷತ್ತನ ಮುಖ್ಯಸ್ಥ ರಾಜು ನಾಲ್ವಾಡದ, ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣವಾಗಿ ಪ್ರಾಣ ಪ್ರತಿಷ್ಠಾಪನೆ ನಡೆಯುತ್ತಿರುವುದು ಸಂತಸದ ವಿಷಯ. ಇದರಂಗವಾಗಿ ಜ.22ರಂದು ಮಾರುತಿ ದೇವಸ್ಥಾನದಲ್ಲಿ ರುದ್ರಾಭಿಷೇಕ, ರಾಮ ನಾಮ ಜಪ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ವಿಶ್ವ ಹಿಂದೂ ಪರಿಷತ್ ಹಾಗೂ ಬಿಜೆಪಿ ಯುವ ಮುಖಂಡ ಬಸವರಾಜ ಮುಳ್ಳಾಳ, ಕಳಕೇಶ ಟೆಂಗಿನಕಾಯಿ, ಪ್ರವೀಣ ಕಲಾಲ, ಪುಟ್ಟರಾಜ ನಾಲ್ವಾಡ, ಶಿವರಾಜ ಕಟ್ಟಿ, ಮಂಜುನಾಥ ಕವಲೂರು, ಬೂದೇಶ ಕಟಗಿ, ಪ್ರಭು ಪುರದ, ಮನು ಹರಿಹರ, ಈಸ್ವರ ತೋಟದ, ಮುತ್ತು ಕಲ್ಮಠ, ಅರುಣ ಬಂಡಿ, ಈರಣ್ಣ ಅರಹುಣಶಿ, ಸಂತೋಷ ಬಾರಕೇರ, ಶರಣಬಸನಗೌಡ ಪಾಟೀಲ, ಚಂದ್ರು ಚಬ್ಬರಭಾವಿ, ರಾಜು ಕವಲೂರು ಮುಂತಾದವರಿದ್ದರು.

### ಮಹಾಯೋಗಿ ವೇಮನ ಜಯಂತಿ ಕಾರ್ಯಕ್ರಮದಲ್ಲಿ ನಗರಸಭೆ ಅಧ್ಯಕ್ಷೆ ಉಷಾ ದಾಸರ

# ಮನುಕುಲದ ಉದ್ಧಾರಕ್ಕಾಗಿ ಮಹಾ ಯೋಗಿಯಾದ ವೇಮನ

**■ವಿಜಯಸಾಕ್ಷಿ ಸುದ್ದಿ, ಗದಗ**

ಆಸೆ–ಆಮಿಷಗಳಿಗೆ ಒಳಪಟ್ಟು ಭೋಗಿಯಾದಂತಹ ವೇಮನರು ತ್ಯಾಗ ಜೀವನದ ಸಾರ್ಥಕತೆಯೊಂದಿಗೆ ಮನು ಕುಲದ ಉದ್ಧಾರಕ್ಕಾಗಿ ಮಹಾ ಯೋಗಿಯಾದರು ಎಂದು ಗದಗ–ಬೆಟಗೇರಿ ನಗರಸಭೆ ಅಧ್ಯಕ್ಷೆ ಉಷಾ ದಾಸರ ನುಡಿದರು.

ಜಿಲ್ಲಾಡಳಿತ ಭವನದ ಅಡಿಟೋರಿಯಂ ಸಭಾಂಗಣದಲ್ಲಿ ಶುಕ್ರವಾರದಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಜರುಗಿದ ಮಹಾಯೋಗಿ ವೇಮನ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಹಾಯೋಗಿ ವೇಮನರು ಶ್ರೇಷ್ಠ ವಚನಕಾರ, ಕವಿ, ಸಮಾಜ ಚಿಂತಕರು, ಮಾನವ ಕುಲದ ಏಳಿಗೆಗಾಗಿ ಶ್ರಮಿಸಿದ ಮಹಾಯೋಗಿಯಾಗಿದ್ದರು. ಅವರು ಸಾರ್ವಕಾಲಿಕ ದಾರ್ಶನಿಕರಾಗಿದ್ದು ಅವರ ತತ್ವ ಸಿದ್ಧಾಂತಗಳು ಇಂದಿಗೂ ಮಾದರಿಯಾಗಿವೆ. ಇಂದಿನ ಯುವ ಪೀಳಿಗೆಗೆ ಮಹಾ ಯೋಗಿ ವೇಮನರ ತತ್ವ ಸಿದ್ಧಾಂತಗಳನ್ನು ತಿಳಿಸುವ ಕಾರ್ಯವಾಗಬೇಕಾಗಿದೆ ಎಂದರು.

ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ. ಮಾತನಾಡಿ, ಸಾಮಾಜಿಕ ಸಮಸ್ಯೆಗಳನ್ನು ತೊಡೆದು ಹಾಕಲು ಹಾಗೂ ಸಾಮಾಜಿಕ ಸಮಾನತೆ ತರಲು ಅನೇಕ ದಾರ್ಶನಿಕರು ಶ್ರಮಿಸಿದ್ದಾರೆ. ಅಂತಹವರಲ್ಲಿ ಮಹಾಯೋಗಿ ವೇಮನರು ಒಬ್ಬರಾಗಿದ್ದಾರೆ. ಕನ್ನಡದಲ್ಲಿ ಸರ್ವಜ್ಞ, ತಮಿಳಿನ ತಿರುವಳ್ಳುವರ್ ಅವರಂತೆ ತೆಲುಗಿಗೆ ವೇಮನರು ಮಹಾಯೋಗಿಯಾಗಿದ್ದಾರೆ. ವೇಮನರು ಪದ್ಯಗಳ ಮೂಲಕ ಜನ ಸಾಮಾನ್ಯರಿಗೆ ತಿಳುವಳಿಕೆ ನೀಡಿದ್ದು ಅವರ ತತ್ವಾದರ್ಶಗಳು ಸಾರ್ವಕಾಲಿಕವಾಗಿವೆ ಎಂದರು.




# ಗೋವಿನ ಜೋಳದ ಕ್ಷೇತ್ರೋತ್ಸವ

**■ವಿಜಯಸಾಕ್ಷಿ ಸುದ್ದಿ, ಮುಂಡರಗಿ**

ಕಾವೇರಿ ಕೆಎಮ್‌ಎಚ್ 8333 ಗೋವಿನ ಜೋಳದ ಬೀಜ ಹೆಚ್ಚು ಅಭಿವೃದ್ಧಿಪಡಿಸಿದ್ದು, ಜೋಳದ ತೆನೆ, ಕಾಳು ದೊಡ್ಡದಾಗಿರುತ್ತದೆ. ಉತ್ತಮ ಗುಣಮಟ್ಟದ ಇಳುವರಿ ಹಾಗೂ ರೈತರಿಗೆ ಹೆಚ್ಚಿನ ಆದಾಯ ತಂದುಕೊಡುವಲ್ಲಿ ಫಲಕಾರಿಯಾಗಿದೆ ಎಂದು ಕಾವೇರಿ ಸೀಡ್ಸ್ ಕಂಪನಿಯ ಆರ್‌ಬಿಎಮ್ ಅಧಿಕಾರಿ ಕೋಟೆಪ್ಪ ಭೀಮಪ್ಪನವರ ಹೇಳಿದರು.

ಡಂಬಳ ಗ್ರಾಮದ ರೈತ ಗುರಪ್ಪ ಚಿಕರೆಡ್ಡಿ ಅವರ ಜಮೀನಿನಲ್ಲಿ ಕಾವೇರಿ ಸೀಡ್ಸ್ ಕಂಪನಿ ಲಿ. ಹಮ್ಮಿಕೊಂಡಿದ್ದ ಗೋವಿನ ಜೋಳದ ಕ್ಷೇತ್ರೋತ್ಸವದಲ್ಲಿ ಅವರು ಮಾತನಾಡಿ, ಎಲ್ಲರೂ ದೇಶದ ಹಿತಕ್ಕಾಗಿ ಶ್ರಮಿಸಬೇಕು. ನಾವು ಕೂಡಾ ರೈತರು ಬೆಳೆದ 4 ಸಾವಿರ ಜೋಳದ ತೆನೆಯಿಂದ ರಾಮ ಮಂದಿರವನ್ನು ಮಾಡಿದ್ದೇವೆ ಎಂದರು.

ರೈತ ಶ್ರೀಗುರಪ್ಪ ಚಿಕರೆಡ್ಡಿ ಮಾತನಾಡಿ, ಕಾವೇರಿ ಗೋವಿನ ಜೋಳದ ಬೀಜವನ್ನು 3 ವರ್ಷದಿಂದ ಬಿತ್ತನೆ ಮಾಡುತ್ತಿದ್ದು, ಉತ್ತಮ ಇಳುವರಿಯನ್ನು ಪಡೆದು ಲಾಭ ಹೊಂದಲು ಸಹಕಾರಿಯಾಗಿದೆ ಎಂದರು.

ವಿತರಕ ಪ್ರವೀನ ಇಡಗಲ್ಲ ಮಾತನಾಡಿದರು. ಕಾರ್ಯಕ್ರಮದಲ್ಲಿ ಜಿ.ಪಂ ಮಾಜಿ ಉಪಾಧ್ಯಕ್ಷ ಬೀರಪ್ಪ ಬಂಡಿ, ಕಾವೇರಿ ಬೀಜ ಕಂಪನಿಯ ಸೇಲ್ಸ್ ಅಧಿಕಾರಿ ಕಾಲೇಶ ಸೂಡಿ, ಸಿದ್ದನಗೌಡ್ರ ಕರಿಗೌಡ್ರ, ಮುತ್ತಣ್ಣ ಹೂಗಾರ, ಕಲಮೇಶ ಕಲ್ಲನಗೌಡರ, ಬಶೀರಹಮ್ಮದ ತಾಂಬೋಟಿ, ಅಶೋಖ ತಂತ್ರಿ, ಬಸುರಾಜ ಹಾರೂಗೇರಿ, ಅಜ್ಜಪ್ಪ ಲಿಂಬಿಕಾಯಿ, ವೆಂಕಟೇಶ ತಳವಾರ, ವರ್ತಕರು ಹಾಗೂ ರೈತರಿದ್ದರು.




# ಕ್ರೀಡೆಯ ಮೂಲಕ ಆರೋಗ್ಯ ಕಾಪಾಡಿಕೊಳ್ಳಿ

**■ವಿಜಯಸಾಕ್ಷಿ ಸುದ್ದಿ, ಗದಗ**

ಕ್ರೀಡೆಯಲ್ಲಿನ ಶಿಸ್ತನ್ನು ಮೈಗೂಡಿಸಿಕೊಂಡಾಗ ಯಾವುದೇ ಸಾಧನೆ ಮಾಡಲು ಸಾಧ್ಯ. ಎಷ್ಟೇ ಶ್ರೀಮಂತರಾಗಿದ್ದರೂ ಆರೋಗ್ಯದ ಮುಂದೆ ಎಲ್ಲವೂ ಶೂನ್ಯ. ನಿತ್ಯ ಯೋಗ, ವ್ಯಾಯಾಮ ಮಾಡುವ ಮೂಲಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂದು ಮುಷ್ಠಿ ಕರಾಟೆ ಸಂಸ್ಥೆಯ ಅಧ್ಯಕ್ಷೆ ವರಲಕ್ಷ್ಮೀ ಹೊಂಬಾಳಿ ನುಡಿದರು.

ಅವರು ನಗರದ ವಿದ್ಯಾದಾನ ಸಮಿತಿ ಕ್ಲಾಸಿಕ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಇತ್ತೀಚೆಗೆ ಜರುಗಿದ 2023–24ನೇ ಸಾಲಿನ ವಾರ್ಷಿಕ ಕ್ರೀಡಾಕೂಟದಲ್ಲಿ ಮಾತನಾಡಿದರು.

ಶ್ರೀನಿವಾಸ ಹುಯಿಲಗೋಳ ಮಾತನಾಡಿ, ಕ್ರೀಡೆ ದೇಹಕ್ಕೆ ಮತ್ತು ಮನಸ್ಸಿಗೆ ಖುಷಿ ಕೊಡುವುದರೊಂದಿಗೆ ಜೀವನದ ಮೌಲ್ಯಗಳನ್ನು ಕಲಿಸಿಕೊಡುತ್ತದೆ. ಸೋಲು–ಗೆಲುವುಗಳನ್ನು ಸಮಾನವಾಗಿ ಸ್ವೀಕರಿಸುವ ಮನೋಭಾವವನ್ನು ಬೆಳೆಸಿ, ಬದುಕಿಗೆ ಶಕ್ತಿ ತುಂಬುತ್ತದೆ ಎಂದರು.

ಸಮಿತಿಯ ಆಡಳಿತಾಧಿಕಾರಿ ಡಾ. ಗಂಗೂಬಾಯಿ ಪವಾರ, ಸಿಆರ್‌ಪಿಗಳಾದ ರವಿ ಹೆಬ್ಬಳ್ಳಿ ವಿದ್ಯಾರ್ಥಿಗಳ ಪಥಸಂಚಲನದ ಗೌರವವನ್ನು ಸ್ವೀಕರಿರಿ, ಪ್ರಾಸ್ತಾವಿಕ ನುಡಿಗಳನ್ನಾಡಿದರು. ಮುಷ್ಟಿ ಕರಾಟೆಯ ಮುಖ್ಯ ಕೋಚ್ ಬಸವರಾಜ ಹೊಂಬಾಳಿ ಮಾತನಾಡಿದರು. ದೈಹಿಕ ಶಿಕ್ಷಕ ರಮೇಶ ಲಮಾಣಿ ಕ್ರೀಡಾ ಪ್ರತಿಜ್ಞಾವಿಧಿಯನ್ನು ಬೋಧಿಸಿದರು. ಪಿ.ಜಿ. ನಾಯಕ ಕ್ರೀಡಾಕೂಟದಲ್ಲಿರುವ ಕ್ರೀಡೆಗಳ ವಿಧಗಳು ಹಾಗೂ ಅವುಗಳ ನೀತಿ–ನಿಯಮಗಳ ಕುರಿತು ಮಕ್ಕಳಿಗೆ ತಿಳಿಸಿದರು.

ಸಾನ್ವಿ ಸೋಮಣ್ಣವರ ಹಾಗೂ ಸಂಗಡಿಗರು ಪ್ರಾರ್ಥನೆಗೈದರು. ಪಾರ್ವತಿ ಕಟ್ಟಿಮನಿ ಸ್ವಾಗತಿಸಿದರು. ಶಿಕ್ಷಕಿ ಗಾಯಿತ್ರಿ ಅಸುಂಡಿ ನಿರೂಪಿಸಿದರು, ಶ್ವೇತಾ ಮೇಲಗಿರಿ ವಂದಿಸಿದರು. ಕಾರ್ಯಕ್ರಮದಲ್ಲಿ ಶಾಲೆಯ ನಿರ್ದೇಶಕ ಪ್ರತೀಕ ಎಸ್. ಹುಯಿಲಗೋಳ, ಮುಖ್ಯೋಪಾಧ್ಯಾಯ ಎಂ.ಆರ್. ಡೊಳ್ಳಿನ, ಎಂ.ವಿ. ಹವಲ್ದಾರ, ಸುಮಂಗಲಾ ಆಸಂಗಿ, ವೀಣಾ ನಾಯಕ, ವೀಣಾ ಹುಬ್ಬಳ್ಳಿ, ಶ್ರೇಯಾ ತಿಪ್ಪನ್ನವರ್, ಶಾಲೆಯ ಸಮಸ್ತ ಶಿಕ್ಷಕ/ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.




# ಹುಡ್ಕೋ ನಿವೇಶನ ಫಲಾನುಭವಿಗಳಿಂದ ಚರ್ಚೆ




**■ವಿಜಯಸಾಕ್ಷಿ ಸುದ್ದಿ, ಗದಗ**

ಇಲ್ಲಿನ ಕಳಸಾಪೂರ ಹುಡ್ಕೋ ನಿವೇಶನ ಪಡೆದ ಫಲಾನುಭವಿಗಳು ಕಳಸಾಪೂರ ಗ್ರಾಮ ಪಂಚಾಯಿತಿ ಕಚೇರಿಯನ್ನು ಸಂಪರ್ಕಿಸಿ, ಅಧ್ಯಕ್ಷೆ ಅನುಸೂಯಾ ಬಿ.ಬೆಟಗೇರಿ, ಮಾಜಿ ಅಧ್ಯಕ್ಷ ರಾಮಪ್ಪ ಅಣ್ಣಿಗೇರಿ, ಸದಸ್ಯರಾದ ಚಂದ್ರು ಲಮಾಣಿ, ಸಂತೋಷ ನಾಯ್ಕರ್, ಪಿಡಿಓ ಕೊಟ್ರೇಶ ಹೋಲಿ ಅವರೊಂದಿಗೆ ಮುಂದಿನ ಅಭಿವೃದ್ಧಿ ಕಾರ್ಯಕ್ರಮದ ಕುರಿತು ಚರ್ಚಿಸಿದರು.

ಸಂಘಟಕರಾದ ಡಾ. ಆರ್.ಎಚ್. ಕಬಾಡಿ, ಎಸ್.ವಿ. ಪೊಲೀಸ್‌ಪಾಟೀಲ, ಆರ್.ಬಿ. ಹಬೀಬ, ಈಶ್ವರ ಕೋಟಿ, ಆಯ್.ಎಸ್. ಕುಬಸದ, ವೆರ್ಣೇಕರ ಮುಂತಾದವರು ಭಾಗವಹಿಸಿದ್ದರು.

# ಪರೀಕ್ಷಾ ಕೇಂದ್ರಗಳ ಸುತ್ತಲೂ ನಿಷೇಧಾಜ್ಞೆ ಜಾರಿ

■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ಲೋಕಸೇವಾ ಆಯೋಗವು ವಾಣಿಜ್ಯ ತೆರಿಗೆ ಇಲಾಖೆಯಲ್ಲಿನ ಉಳಿಕೆ ಮೂಲ ವೃಂದದ ವಾಣಿಜ್ಯ ತೆರಿಗೆ ಪರಿವೀಕ್ಷಕರ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಜ.20, 21 ರಂದು ನಡೆಸಲಿದೆ.

ಪರೀಕ್ಷಾ ಸಮಯದಲ್ಲಿ ನಕಲು ಮಾಡುವುದು, ಪರೀಕ್ಷಾರ್ಥಿಗಳ ಬದಲು ಬೇರೆಯವರು ಪರೀಕ್ಷೆಗೆ ಹಾಜರಾಗುವುದು ಮುಂತಾದ ಅವ್ಯವಹಾರ ತಡೆಗಟ್ಟಲು ಮತ್ತು ಪರೀಕ್ಷಾ ಕೇಂದ್ರಗಳಲ್ಲಿ ಶಿಸ್ತು ಮತ್ತು ಶಾಂತಿ ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಜ.20ರಂದು ಜಿಲ್ಲೆಯ 6 ಪರೀಕ್ಷಾ ಕೇಂದ್ರಗಳ ಹಾಗೂ ಜ.21ರಂದು ಜಿಲ್ಲೆಯ 8 ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಿ, ಬೆಳಿಗ್ಗೆ 9ರಿಂದ ಸಂಜೆ 5.30ರವರೆಗೆ ಪ್ರತಿಬಂಧಕಾಜ್ಞೆ ಜಾರಿಗೊಳಿಸಲಾಗಿದೆ.

ಪರೀಕ್ಷಾರ್ಥಿಗಳು ಹಾಗೂ ಪರೀಕ್ಷೆಯಲ್ಲಿ ಕಾರ್ಯ ನಿರ್ವಹಿಸುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಹೊರತುಪಡಿಸಿ ಇತರ ಯಾವುದೇ ವ್ಯಕ್ತಿ ಅಥವಾ ಐದು, ಐದಕ್ಕಿಂತ ಹೆಚ್ಚು ಜನರು ಗುಂಪು ಕೂಡುವುದು, ಅಥವಾ ವ್ಯಕ್ತಿಗಳ ಗುಂಪುಗಳ ಪ್ರವೇಶವನ್ನು ನಿರ್ಬಂಧಿಸಲಾಗಿದೆ. ಈ ಪ್ರದೇಶ ವ್ಯಾಪ್ತಿಯಲ್ಲಿ ಬರುವ ಝೆರಾಕ್ಸ್ ಅಂಗಡಿ, ಬುಕ್ ಸ್ಟಾಲ್, ಫೋಟೋ ಕಾಪಿಯರ್‌ಗಳನ್ನು ಬಂದ್ ಮಾಡಲು ಆದೇಶಿಸಿದೆ. ಪರೀಕ್ಷಾ ಕೇಂದ್ರಗಳಲ್ಲಿ ಮೊಬೈಲ್ ಫೋನ್ ಮತ್ತು ಇತರೇ ಸಂಪರ್ಕ ಸಲಕರಣೆಗಳನ್ನು ತರುವುದನ್ನು ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಮತ್ತು ಜಿಲ್ಲಾ ದಂಡಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಂಪಾದಕರ ಸಂಘದಿಂದ ವಾರ್ತಾ ಇಲಾಖೆಯ ಆಯುಕ್ತರಿಗೆ ಮನವಿ


# ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ಜಿಲ್ಲಾ ಮಟ್ಟದ ದಿನಪತ್ರಿಕೆಗಳು ಮತ್ತು ಪ್ರಾದೇಶಿಕ ಪತ್ರಿಕೆಗಳ ಸಮಸ್ಯೆಗಳ ಕುರಿತ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಿಗೆ ದಿನಪತ್ರಿಕೆಗಳ ಸಂಪಾದಕರ ಸಂಘದಿಂದ ಮನವಿ ಸಲ್ಲಿಸಲಾಯಿತು.

ಮನವಿ ಸ್ವೀಕರಿಸಿ ಮಾತನಾಡಿದ ವಾರ್ತಾ ಇಲಾಖೆಯ ಆಯುಕ್ತ ಹೇಮಂತ್ ಕುಮಾರ್ ನಿಂಬಾಳ್ಕರ್, ಜಾಹೀರಾತು ಸಂಸ್ಥೆಗಳ ಮೂಲಕ ಬಿಡುಗಡೆ ಆಗುವ ವಾರ್ತಾ ಇಲಾಖೆಯ ಜಾಹೀರಾತುಗಳಿಗೆ, ಪತ್ರಿಕೆಯಲ್ಲಿ ಪ್ರಕಟಗೊಂಡ ದಿನಾಂಕದಿಂದ 3 ತಿಂಗಳೊಳಗೆ ಹಣ ಪಾವತಿ ಮಾಡದಿದ್ದರೆ, ಅಂತಹ ಜಾಹೀರಾತು ಸಂಸ್ಥೆಗಳಿಗೆ ಕಮಿಷನ್ ರದ್ದುಗೊಳಿಸಲಾಗುವುದು ಎಂದು ತಿಳಿಸಿದರು.

ಸಂಪಾದಕರ ಸಂಘದ ರಾಜ್ಯಾಧ್ಯಕ್ಷ ಎ.ಸಿ. ತಿಪ್ಪೇಸ್ವಾಮಿ ಮಾತನಾಡಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ಜಿಲ್ಲಾ ಮಟ್ಟದ ದಿನಪತ್ರಿಕೆಗಳು ಮತ್ತು ಪ್ರಾದೇಶಿಕ ಪತ್ರಿಕೆಗಳು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿವೆ. ಪ್ರಜಾಪ್ರಭುತ್ವದ 4ನೇ ಅಂಗವೆಂದು ಹೇಳುವ ಪತ್ರಿಕಾ ರಂಗ ಇತ್ತೀಚಿನ ದಿನಗಳಲ್ಲಿ ಬಡವಾಗುತ್ತಿದೆ. ಪತ್ರಿಕೆಗಳ ಬೆಳವಣಿಗೆಗೆ ಸರ್ಕಾರ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದರೂ ಅವುಗಳಿಂದ ಪತ್ರಿಕೆಗಳ ಬೆಳವಣಿಗೆ ಆಗುತ್ತಿಲ್ಲ ಎಂದರು.




ಶೇ.12ರಷ್ಟು ಜಾಹೀರಾತು ದರವನ್ನು ಕೂಡಲೇ ಹೆಚ್ಚಿಸಬೇಕು, ಪತ್ರಿಕೆಗಳಿಗೆ ಬಾಕಿ ಜಾಹೀರಾತುಗಳನ್ನು ಬಿಡುಗಡೆ ಮಾಡಬೇಕು, ಬಾಕಿ ಇರುವ ಎಲ್ಲಾ ಬಗೆಯ ಜಾಹೀರಾತುಗಳ ಹಣ ಪಾವತಿಗೆ ಅನುದಾನ ಬಿಡುಗಡೆ ಮಾಡಬೇಕು, ಇಲಾಖೆಯ ಅಂಗೀಕೃತ ಜಾಹೀರಾತು ಸಂಸ್ಥೆಗಳು ಪಾವತಿಸಬೇಕಾದ ಜಾಹೀರಾತು ಬಿಲ್‌ಗಳ ಬಾಕಿ ಹಣವನ್ನು ಪಾವತಿಗೆ ಕ್ರಮ ಕೈಗೊಳ್ಳಬೇಕು, ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳಿಗೆ ಯಾವುದೇ ತಾರತಮ್ಯ ಆಗದಂತೆ ಜಾಹೀರಾತು ಬಿಡುಗಡೆ ಮಾಡಬೇಕು, ಇಲಾಖೆಯಿಂದ ಏಜೆನ್ಸಿಗಳಿಗೆ ಜಾಹೀರಾತು ಬಿಲ್‌ಗಳ ಪಾವತಿ ಆಗಿದ್ದರೂ, ಕೆಲವು ಏಜೆನ್ಸಿಗಳು ಹಣ ಪಾವತಿ ಮಾಡದೇ ವಿಳಂಬ ಧೋರಣೆ ಅನುಸರಿಸುತ್ತಿದ್ದು, ಅಂತಹ ಏಜೆನ್ಸಿಗಳ ಮೇಲೆ ಕ್ರಮ ಕೈಗೊಳ್ಳಬೇಕು ಇವೇ ಮುಂತಾದ ಬೇಡಿಕೆಗಳುಳ್ಳ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಚನ್ನಬಸವ ಬಾಗಲವಾಡ, ರಾಜ್ಯ ಖಜಾಂಚಿ ಖಾನ್ ಸಾಬ್ ಮೋಮಿನ್, ರಾಜ್ಯ ಉಪಾಧ್ಯಕ್ಷರುಗಳಾದ ಮಂಜುನಾಥ ಬಿ.ಅಬ್ಬಿಗೇರಿ, ಜಿ.ವೈ. ಪದ್ಮಾ, ಭೀಮರಾಯ ಹದ್ದಿನಾಳ, ಮಹ್ಮದ್ ಯೂನೂಸ್, ಕಾರ್ಯದರ್ಶಿಗಳಾದ ವಿ.ಅನೂಪ್‌ಕುಮಾರ್, ಹೆಚ್. ನರಸಿಂಹರಾಜು, ಓ.ಮಲ್ಲೇಶ್, ಸಹ ಕಾರ್ಯದರ್ಶಿಗಳಾದ ಡಾ. ಕೆ.ಎಂ. ಸ್ವಾಮಿ, ಗುರುಬಸಯ್ಯ ಸ್ವಾಮಿ, ಜಂಟಿ ಕಾರ್ಯದರ್ಶಿಗಳಾದ ದಿನೇಶ ಬಿ.ಹೆಚ್., ಸುಧಾಕರ, ಅರುಣಾ ಜ್ಯೋತಿ, ಅಮನ್ ಕೊಡಗಲಿ, ನೂರ್ ಅಹ್ಮದ್ ಮಕಾನದಾರ, ಎನ್.ಆರ್. ಭಾಂಡಗೆ, ಜಗದೀಶ ಪೂಜಾರ್, ದೇವಪ್ಪ ಲಿಂಗದಾಳ, ರಾಜು ಹೆಬ್ಬಳ್ಳಿ, ಸಚೇಂದ್ರ ಲಂಬು, ಲಕ್ಷ್ಮಣ ರಾವ್ ಕಪಗಲ್, ರಘುವೀರ ನಾಯಕ, ಶಿವಶಂಕರ ಮಂಡ್ಯ, ಮಲ್ಲಿಕಾರ್ಜುನ ಯಾದಗಿರಿ, ಮನೋಹರ ಬೆಳಗಾವಿ ಮುಂತಾದವರಿದ್ದರು.

# ಮನೋರಮಾ ಕಾಲೇಜಿನಲ್ಲಿ 'ಮಾರ್ಕೆಟಿಂಗ್ ಫುಡ್ ಫೆಸ್ಟ್'



■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಮನೋರಮಾ ಮಹಾವಿದ್ಯಾಲಯದಲ್ಲಿ 'ಮಾರ್ಕೆಟಿಂಗ್ ಫುಡ್ ಫೆಸ್ಟ್' ಕಾರ್ಯಕ್ರಮ ಆಯೋಜಿಸಲಾಗಿತ್ತು.

ಬಿ.ಕಾಂ/ಬಿಬಿಎ ವಿದ್ಯಾರ್ಥಿಗಳಿಗೆ ಮಾರ್ಕೆಟಿಂಗ್ ವಿಷಯವಾಗಿ ಬಿಬಿಎ ಸಂಯೋಜಕಿ ಪ್ರೊ. ಚೈತ್ರಾ ದಲಭಂಜನ ಈ ಕಾರ್ಯಕ್ರಮ ಆಯೋಜಿಸಿದ್ದರು. ಪ್ರಾಚಾರ್ಯ ಬಿ.ಎಸ್. ಹಿರೇಮಠ ಮಾತನಾಡಿ, ಬಿಬಿಎ ಹಾಗೂ ಬಿ.ಕಾಂ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಮಾರ್ಕೆಟಿಂಗ್ ಫುಡ್ ಫೆಸ್ಟ್ ಚಟುವಟಿಕೆ ಇದಾಗಿದೆ ಎಂದರು.

ಅಧ್ಯಕ್ಷತೆಯನ್ನು ಸಂಸ್ಥೆಯ ಚೇರಮನ್ ಎನ್.ಎಮ್. ಕುಡತರಕರ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಹಿರಿಯ ಉಪನ್ಯಾಸಕ ಪ್ರೊ. ಎಸ್. ಎಚ್. ಬಡೇಖಾನ ಮಾತನಾಡಿ, ವಿದ್ಯಾರ್ಥಿ ಸಮುದಾಯ ಪಠ್ಯ-ಪುಸ್ತಕದೊಂದಿಗೆ ವ್ಯಾವಹಾರಿಕ ಜ್ಞಾನ ಬೆಳೆಸಿಕೊಂಡರೆ ಬದುಕು ಹಸನಾಗುವುದು ಎಂದರು. ಇನ್ನೊರ್ವ ಅತಿಥಿ ಪ್ರೊ. ಪ್ರಕಾಶ ಕರಿಗಾರ ಮಾತನಾಡಿದರು. ಆಡಳಿತಾಧಿಕಾರಿ ಕಿಶೋರ ಮುದಗಲ್ಲ ಸೇರಿದಂತೆ ಗಣ್ಯರು ವಿದ್ಯಾರ್ಥಿಗಳು ತಯಾರಿಸಿದ ವಿವಿಧ ರೀತಿಯ ಆಹಾರ-ಪದಾರ್ಥಗಳನ್ನು ಸವಿದು ವಿದ್ಯಾರ್ಥಿಗಳನ್ನು ಉತ್ತೇಜಿಸಿದರು.

ಸಂಸ್ಥೆಯ ನಿರ್ದೇಶಕರಾದ ಮಂಜುನಾಥ ಕುಡತರಕರ, ಸಂಜಯ ಕುಡತರಕರ, ಚೇತನ ಕುಡತರಕರ, ಸಹ ಸಂಯೋಜಕಿಯರಾದ ಪ್ರೊ. ಸವಿತಾಪೂಜಾರ, ಪ್ರೊ. ಅಲ್ವಿನಾ ಡಿ, ಪ್ರೊ. ಚೈತ್ರಾ ದಲಬಂಜನ, ಪಿಯು ಸಂಯೋಜಕರಾದ ಪ್ರೊ. ಶಾಹಿದಾ ಶಿರಹಟ್ಟಿ, ಪ್ರೊ. ಸಂಗಮೇಶ ಹಾದಿಮನಿ, ದೈಹಿಕ ನಿರ್ದೇಶಕರಾದ ಖಯುಮ ನವಲೂರ, ಹರೀಶ ಬಾರಕೇರ, ಆಫೀಸ್ ಸುಪರಿಡೆಂಡೆಂಟ್ ಉಮಾ ದಿನ್ನಿ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಹೊಳೆಆಲೂರಿನ ಶ್ರೀ ಕವಿಪ್ರ ಮಹಾವಿದ್ಯಾಲಯದಲ್ಲಿ ಜ.23, 24ಕ್ಕೆ ಯುವ ಕಲರವ

# ಗದಗ ಜಿಲ್ಲಾ ವಲಯ ಮಟ್ಟದ ಯುವಜನೋತ್ಸವ

■ವಿಜಯಸಾಕ್ಷಿ ಸುದ್ದಿ, ರೋಣ

ಹೊಳೆಆಲೂರಿನ ಶ್ರೀ ಕಲ್ಮೇಶ್ವರ ವಿದ್ಯಾ ಪ್ರಸಾರಕ ಸಮಿತಿಯ ಕಲಾ, ವಿಜ್ಞಾನ, ವಾಣಿಜ್ಯ ಮಹಾವಿದ್ಯಾಲಯ ಹಾಗೂ ಕನ್ನಡ ಸ್ನಾತ್ತಕೋತ್ತರ ಅಧ್ಯಯನ ಕೇಂದ್ರ ಹೊಳೆ ಆಲೂರ ವತಿಯಿಂದ 2023-24ನೇ ಸಾಲಿನ ಗದಗ ಜಿಲ್ಲಾ ವಲಯ ಮಟ್ಟದ ಯುವಜನೋತ್ಸವ ಜ.23, 24ರಂದು ನಡೆಯಲಿದೆ.

ಮಹಾವಿದ್ಯಾಲಯದ ಆವರಣದ ಸಭಾಮಂಟಪದಲ್ಲಿ ಜ23ರ ಬೆಳಿಗ್ಗೆ 10 ಗಂಟೆಗೆ ನಡೆಯಲಿರುವ ಕಾರ್ಯಕ್ರಮದ ಸಾನ್ನಿಧ್ಯವನ್ನು ಯಚ್ಚರಸ್ವಾಮಿಮಠದ ಯಚ್ಚರಸ್ವಾಮಿಗಳು, ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷ ಬಿ.ಸಿ. ಪಾಟೀಲ ವಹಿಸಲಿದ್ದಾರೆ. ನಿವೃತ್ತ ಪ್ರಾಚಾರ್ಯ ಎಸ್. ಎಸ್. ಪಟ್ಟಣಶೆಟ್ಟಿ ಕಾರ್ಯಕ್ರಮ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಕವಿವಿ ಧಾರವಾಡ ವಿದ್ಯಾರ್ಥಿ ಕಲ್ಯಾಣ ವಿಭಾಗದ ಡಾ. ಎಸ್.ಕೆ. ಪವಾರ, ಕವಿಪ್ರ ಸಮಿತಿ ಉಪಾಧ್ಯಕ್ಷ ಬಿ.ಕೆ. ಜೋಶಿ, ನಿರ್ದೇಶಕರಾದ ಬಿ.ಬಿ. ಸಾಸಳ್ಳಿ, ಎಂ.ಸಿ. ಬ್ಯಾಡಗಿ, ಡಿ.ಎಸ್. ಶೆಲ್ಲಿಕೇರಿ, ಸಿ.ಆರ್. ಕಂಬಿ ಆಗಮಿಸಲಿದ್ದಾರೆ.

ಜ.24ರ ಮಧ್ಯಾಹ್ನ 3ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಅಧ್ಯಕ್ಷತೆಯನ್ನು ಪ್ರಾಚಾರ್ಯ ಡಾ. ಪಿ.ಎಸ್. ಕಣವಿ ವಹಿಸಲಿದ್ದಾರೆ. ಸಮಿತಿಯ ಕಾರ್ಯದರ್ಶಿ ಎಂ.ಎನ್. ತೇಜಿಗೌಡ್ರ, ನಿರ್ದೇಶಕರಾದ ಎಸ್.ಜಿ. ಉಡುಪಿ, ಎಂ.ಆರ್. ಐವಳ್ಳಿ, ಆರ್. ಜೆ. ಮಾಲಿಪಾಟೀಲ, ವಾಯ್.ಎಸ್. ಬೇಲಿ ಬಹುಮಾನ ವಿತರಿಸುವರು.



ಯುವಜನೋತ್ಸವದಲ್ಲಿ ಗದಗ ಜಿಲ್ಲೆಯ ವಿವಿಧ ಪದವಿ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಸಂಗೀತ, ರಂಗವೇದಿಕೆ ಸ್ಪರ್ಧೆಗಳು, ಚಿತ್ರಕಲೆ, ಕೊಲ್ಯಾಜ್, ಪೋಸ್ಟರ್ ಮೇಕಿಂಗ್, ರಂಗೋಲಿ, ಕ್ಲೇಮಾಡಲಿಂಗ್, ಫೋಟೋಗ್ರಫಿ, ಸಾಂಪ್ರದಾಯಿಕ ಮತ್ತು ಜಾನಪದ ನೃತ್ಯಗಳು, ಭಾಷಣ, ರಸಪ್ರಶ್ನೆ ಮೊದಲಾದ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲಿದ್ದಾರೆ.

ಮಹಾವಿದ್ಯಾಲಯದ ಸಿಬ್ಬಂದಿಗಳಾದ ಪ್ರೊ. ಎನ್. ಆರ್. ಹಿರೇಸಕ್ಕರಗೌಡರ, ಡಾ. ಎಸ್.ಬಿ. ಸಜ್ಜನರ, ಡಾ.ಪ್ರಭು ಗಂಜಿಹಾಳ, ಪ್ರೊ. ಎಸ್.ವಾಯ್. ಪೂಜಾರ, ಡಾ. ಕುಮಾರ ಹಂಜಗಿ, ಪ್ರಾಧ್ಯಾಪಕರಾದ ಆನಂದ ಕೆಂಚನಗೌಡ್ರ, ಎಂ.ಎಸ್. ಬೇವೂರ, ರೇಶ್ಮಾ ಟೆಕ್ಕೇದ, ಸಂತೋಷ ಮಾಳವಾಡ, ಜಯಶ್ರೀ ಪಾಟೀಲ, ಎಂ.ಆರ್. ಆರೇರ, ಕೆ.ಎಸ್. ಕೊಪ್ಪದ, ಶಿಲ್ಪಾ ಮೆದನಾಪೂರ, ಜಿ.ಎಂ. ಪೊಲೀಸಪಾಟೀಲ, ವಿ.ಬಿ. ಜಾಲಿಹಾಳ, ವಾಯ್. ಎಂ. ನದಾಫ, ಎಸ್.ಆರ್. ಮುಂದಿನಮನಿ, ಎಸ್.ಜಿ. ಮಾಳವಾಡ, ಸಂಯೋಜಕರಾದ ಪ್ರೊ. ವಿ.ಪಿ. ಪಾಟೀಲ, ಪ್ರೊ. ಎಸ್.ಬಿ. ಹಳ್ಳೂರ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಕೋರಿದ್ದಾರೆ.

# ವೇಮನರ ಕಾವ್ಯದಲ್ಲಿ ಸತ್ವ ಅಡಗಿದೆ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಇಲ್ಲಿನ ಸರಕಾರಿ ಮಾದರಿ ಪ್ರಾಥಮಿಕ ಕನ್ನಡ ಹೆಣ್ಣು ಮಕ್ಕಳ ಶಾಲೆಯಲ್ಲಿ ಶುಕ್ರವಾರ ಮಹಾತಪಸ್ವಿ ಯೋಗಿ ವೇಮನ ಜಯಂತಿಯನ್ನು ಆಚರಿಸಲಾಯಿತು.

ಈ ಸಂದರ್ಭದಲ್ಲಿ ಶಾಲೆಯ ಗುರುಮಾತೆ ಎಚ್.ಡಿ. ನಿಂಗರೆಡ್ಡಿ ಮಾತನಾಡಿ, ಯೋಗಿ ವೇಮನ ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ಮೂಗುಚಿಪಲ್ಲಿಯಲ್ಲಿ ಜನಿಸಿದರು. ರಾಜನ ಮಗನಾಗಿದ್ದರೂ ಸಹ ಜನರ ನೋವು-ನಲಿವು ಕಂಡು ಕಾವ್ಯಗಳನ್ನು ರಚಿಸಿದ್ದಾರೆ. ತ್ರಿಪದಿ ಕವಿ ಸರ್ವಜ್ಞನಂತೆ ಲೋಕ ಸಂಚಾರಿಯಾಗಿ ತೆಲುಗಿನಲ್ಲಿ ಚೌಪದಿಗಳನ್ನು ರಚಿಸಿದ್ದು, ಅವರ ಕಾವ್ಯದಲ್ಲಿ ಸತ್ವ ಅಡಗಿದೆ ಎಂದರು.

ಪ್ರಧಾನ ಗುರುಗಳಾದ ಬಿ.ಎಮ್. ಕುಂಬಾರ ಮಾತನಾಡಿ, ಜನಸಾಮಾನ್ಯರ ಬದುಕಿನಲ್ಲಿ ಯೋಗ, ಬುದ್ಧಿವಂತಿಕೆ ಹಾಗೂ ನೈತಿಕತೆ ವಿಷಯಗಳನ್ನು ಹೆಚ್ಚಾಗಿ ಪ್ರತಿಪಾದಿಸಿದ ಯೋಗಿ ವೇಮನ ಭಾರತೀಯ ತತ್ವಜ್ಞಾನಿಗಳ ಸಾಲಿನಲ್ಲಿ ಒಬ್ಬರಾಗಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಸಿಆರ್‌ಸಿ ಸಂಪನ್ಮೂಲ ವ್ಯಕ್ತಿಗಳಾದ ಸತೀಶ್, ಆರ್.ಎಂ. ಶಿರಹಟ್ಟಿ, ಸ್ವಪ್ನ ಕಾಳೆ, ಅತಿಥಿ ಶಿಕ್ಷಕರಾದ ಪೂರ್ವಿ ಮುದುಕಣ್ಣವರ, ರಾಮಣ್ಣ ಉಪನಾಳ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಅಧ್ಯಕ್ಷ ಸ್ಥಾನಕ್ಕೆ ತಕ್ಷಣವೇ ರಾಜೀನಾಮೆ ನೀಡಿ

▶▶ಮೊದಲನೇ ಪುಟದಿಂದ

ಇಲ್ಲವಾದರೆ ನಗರಸಭೆ ಆಡಳಿತವನ್ನು ಸೂಪರ್ ಸೀಡ್ ಮಾಡಬೇಕು ಎಂದರು. ಇದೇ ರೀತಿ ಆಡಳಿತ ನಡೆಸಿದರೆ ನಿರಂತರ ಪ್ರತಿಭಟನೆ ನಡೆಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ನಗರಸಭೆ ಸದಸ್ಯರಾದ ಬರಕತ್ ಅಲಿ ಮುಲ್ಲಾ, ಮೆಹಬೂಬಸಾಬ ನದಾಫ್, ಚಂದ್ರು ಕರಿಸೋಮನಗೌಡ, ಶಿರಹಟ್ಟಿ,

ಲಕ್ಷ್ಮಿ ಸಿದ್ದಮನಹಳ್ಳಿ, ಅಸೂಟಿ, ಶಕುಂತಲಾ ಅಕ್ಕಿ, ಪರ್ವಿನ್ ಬಾನು ಮುಲ್ಲಾ, ಜೂನ್ ಸಾಬ ನಮಾಜಿ, ಹೊಳೆಬಸಪ್ಪಾ ಅಕ್ಕಿ, ಅನಿಲ ಸಿದ್ದಮನಹಳ್ಳಿ, ಮುನ್ನಾ ರೇಷ್ಮೆ ಇತರರು ಇದ್ದರು.

# ವಿದ್ಯುತ್ ಅದಾಲತ್ ಇಂದು

■ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯ ಶಹರ/ಗ್ರಾಮೀಣ ಪ್ರದೇಶಗಳಲ್ಲಿನ ವಿದ್ಯುತ್ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಪ್ರತಿ ತಿಂಗಳಿನ 3ನೇ ಶನಿವಾರ ಸಹಾಯಕ ಕಾರ್ಯಪಾಲಕ ಅಭಿಯಂತರರು, ಗದಗ ಶಹರ/ಗದಗ ಗ್ರಾಮೀಣ, ಮುಂಡರಗಿ ಹಾಗೂ ಲಕ್ಷ್ಮೇಶ್ವರ ಕಾರ್ಯ ಮತ್ತು ಪಾಲನೆ ಉಪವಿಭಾಗಗಳಲ್ಲಿ ವಿದ್ಯುತ್ ಅದಾಲತ್ ನಡೆಸುವ ಮೂಲಕ ಸ್ಥಳದಲ್ಲಿಯೇ ಗ್ರಾಹಕರ ಸಮಸ್ಯೆಗಳಿಗೆ ಪರಿಹಾರ ನೀಡಲು ಕ್ರಮ ವಹಿಸಲು ಸರ್ಕಾರವು ಆದೇಶಿಸಿರುವ ಪ್ರಯುಕ್ತ ಜ. 20ರಂದು ಬೆಳಿಗ್ಗೆ 11 ಗಂಟೆಗೆ ವಿದ್ಯುತ್ ಅದಾಲತ್ ನಡೆಸಲಾಗುವುದು. ಸಾರ್ವಜನಿಕರು ಈ ಪ್ರಕಟನೆಯನ್ನು ಗಮನಿಸಿ ತಮ್ಮ ವಿದ್ಯುತ್ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕೆಂದು ಪ್ರಕಟಣೆಯಲ್ಲಿ ಕೋರಲಾಗಿದೆ.

# ಮಹಾಯೋಗಿ ವೇಮನ ಜಯಂತಿ ಆಚರಣೆ



■ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿಯ ಅಡವಿಸೋಮಾಪೂರದ ಸಣ್ಣ ತಾಂಡೆಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಮಹಾಯೋಗಿ ವೇಮನ ಜಯಂತಿ ಆಚರಿಸಲಾಯಿತು. ಶಾಲೆಯ ಮುಖ್ಯ ಶಿಕ್ಷಕ ಮಲ್ಲೇಶ ಡಿ.ಎಚ್. ವೇಮನ ಅವರ ಜೀವನ ಸಂದೇಶ ಕುರಿತು ಮಾತನಾಡಿದರು.

ಅಡವಿಸೋಮಾಪೂರ ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ ಚಂದ್ರಶೇಖರ ಶಿವಶಿಂಪಿಗೇರ ಮಾತನಾಡಿ, ಸಮಾಜದಲ್ಲಿ ತುಂಬಿದ ಅಂಧಕಾರ, ಅಜ್ಞಾನ ಹೋಗಲಾಡಿಸಲು ವಚನವನ್ನು ರಚಿಸಿ ಅವುಗಳಲ್ಲಿ ಮಾನವೀಯ ಮೌಲ್ಯಗಳನ್ನು ತುಂಬಿ ಜಗದ ಕಣ್ಣು ತೆರೆಸಿದ ಮಹಾನ ಚೇತನ ವೇಮನರು ಎಂದರು.

ಶಾಲೆಯ ಶಿಕ್ಷಕರಾದ ಎಸ್.ಜಿ. ಅಮ್ಮಿನಭಾವಿ, ಎಸ್.ಟಿ. ಹಳಕಟ್ಟಿ, ಪಿ.ಬಿ. ಕಿಲಬನವರ, ಶಾಲಾ ಮೇಲುಸ್ತುವಾರಿ ಸಮಿತಿ ಅಧ್ಯಕ್ಷ ಮಾರುತಿ ಪವಾರ, ಬಿಸಿಯೂಟ ಸಿಬ್ಬಂದಿಗಳಾದ ಗಂಗವ್ವ ಲಮಾಣಿ, ಸಾವಿತ್ರಿ ರಾಠೋಡ, ದೇವಕ್ಕ ಲಮಾಣಿ, ಶಾಲಾ ಮಕ್ಕಳು ಇದ್ದರು.

# ವಿವೇಕಾನಂದರ ಆದರ್ಶಗಳನ್ನು ಅಳವಡಿಸಿಕೊಳ್ಳಿ

■ವಿಜಯಸಾಕ್ಷಿ ಸುದ್ದಿ, ಗದಗ

ಇಂದಿನ ವಿದ್ಯಾರ್ಥಿಗಳು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ಸ್ವಾಮಿ ವಿವೇಕಾನಂದರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಪುನೀತ್ ಮಹಾರಾಜ್ ಹೇಳಿದರು.

ನಗರದ ಸಂಕನೂರ ಇನ್‌ಸ್ಟಿಟ್ಯೂಟ್ ಆಫ್ ನರ್ಸಿಂಗ್ ಕಾಲೇಜಿನಲ್ಲಿ ಸ್ವಾಮಿ ವಿವೇಕಾನಂದರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ತಮ್ಮ ಅಧ್ಯಯನ ಹಾಗೂ ಕ್ರೀಡಾ ಚಟುವಟಿಕೆಗಳಲ್ಲಿ ಭಾಗಿಯಾಗಿ, ವಿವೇಕಾನಂದರಂತೆ ತಮ್ಮ ಜೀವನವನ್ನು ರೂಪಿಸಿಕೊಂಡು ಸಮಯವನ್ನು ದುರ್ಬಳಕೆ ಮಾಡದೇ ಶ್ರೇಷ್ಠ ಹಾಗೂ ಮಹಾನ್ ವ್ಯಕ್ತಿಯಾಗಲು ಕರೆ ನೀಡಿದರು.



ಕಾಲೇಜಿನ ಪ್ರಾಚಾರ್ಯರಾದ ಮೀನಾಕ್ಷಿ ದೇವಾಂಗಮಠ ಮಾತನಾಡಿ, ಸ್ವಾಮಿ ವಿವೇಕಾನಂದರ ಜೀವನದಲ್ಲಿ ನಡೆದ ಹಲವಾರು ಘಟನೆಗಳ ಕುರಿತು ಅನೇಕ ಮಾಹಿತಿಗಳನ್ನು ನೀಡಿದರು. ಡಾ. ಶ್ವೇತಾ ಸಂಕನೂರ ಮಾತನಾಡಿ, ಸ್ವಾಮಿ ವಿವೇಕಾನಂದರ ಆಯಸ್ಸು ಅಲ್ಪವಾದರೂ ಅವರ ಸಾಧನೆ ಮಾತ್ರ ಅಪಾರವಾದದ್ದು ಎಂದರು.

ಅಮೃತಾ ಬಡಿಗೇರ ಭಕ್ತಿ ಗೀತೆ ಹಾಡಿದರು. ಚೈತ್ರಾ ಸ್ವಾಗತಿಸಿದರು. ರೋಹಿಣಿ ಎಸ್. ಕಾರ್ಯಕ್ರಮ ನಿರೂಪಿಸಿದರು. ಕಾಲೇಜಿನ ಉಪನ್ಯಾಸಕರಾದ ರಶ್ಮಿ ವಿನ್ಸೆಂಟ್ ಪಾಟೀಲ್, ಕವಿತಾ ಪವಾರ್ ಮತ್ತು ಕಾಲೇಜಿನ ಉಪನ್ಯಾಸಕರು, ವಿದ್ಯಾರ್ಥಿಗಳು, ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು.

# ವೇಮನರ ಚಿಂತನೆಗಳು ದಾರಿದೀಪ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಮಹಾಕವಿ, ಸಂತ, ಸಿದ್ಧ ಸಾಧಕ ಯೋಗಿ ವೇಮನರು ಲೋಕಸತ್ಯ, ದೈವಸತ್ಯ ಹಾಗೂ ಜೀವನ ಮೌಲ್ಯಗಳನ್ನು ಆಡು ಭಾಷೆಗಳ ಮೂಲಕ ಜನರಿಗೆ ತಲುಪಿಸಿದರು. ಜಾತಿ-ಭೇದಗಳನ್ನು ವಿರೋಧಿಸಿ ಸಮಾನತೆಯನ್ನು ಸಾರಿದರು. ಅವರ ತತ್ವಾದರ್ಶಗಳು ಇಂದಿನ ಯುವಜನತೆಗೆ ಅನುಕರಣೀಯವಾಗಿವೆ ಎಂದು ತಹಸೀಲ್ದಾರ ವಾಸುದೇವ ಸ್ವಾಮಿ ಹೇಳಿದರು.

ಅವರು ಶುಕ್ರವಾರ ಪಟ್ಟಣದ ತಹಸೀಲ್ದಾರ ಕಚೇರಿಯಲ್ಲಿ ಯೋಗಿ ವೇಮನರ ಜಯಂತಿ ಅಂಗವಾಗಿ ವೇಮನರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.




ಮಹಾಭೋಗಿಯಾಗಿದ್ದು, ಮಹಾಯೋಗಿಗಳಾದ ವೇಮನರು ನಾಡಿನಾದ್ಯಂತ ಸಂಚರಿಸಿ ಕಾಯಕನಿಷ್ಠೆ, ಸತ್ಯ, ಧರ್ಮ, ಸಂಸ್ಕೃತಿ, ಭಕ್ತಿ ಮಾರ್ಗ ತೇ-ೂರಿದ್ದಾರೆ. ಅವರ ತತ್ವ ಚಿಂತನೆಗಳು ದಾರಿದೀಪವಾಗಿವೆ. ತಮ್ಮ ಪಾಂಡಿತ್ಯದಿಂದ 3 ಸಾವಿರಕ್ಕೂ ಹೆಚ್ಚು ಸಾಹಿತ್ಯ ಕೃತಿ ರಚಿಸಿ, ಆ ಮೂಲಕ ಸಮಾಜ ಸುಧಾರಣೆಗಾಗಿ ಶ್ರಮಿಸಿದ್ದಾರೆ. ಇಂತಹ ಮಹಾನ್ ಸಂತರನ್ನು ಯಾವುದೇ ಒಂದು ಜಾತಿ, ಜನಾಂಗಕ್ಕೆ ಸೀಮಿತಗೊಳಿಸಬಾರದು ಎಂದರು.

ಹಿರಿಯರಾದ ಶಂಕ್ರಪ್ಪ ಗೊರವರ ಮಾತನಾಡಿ, ಬುದ್ಧನ ಕರುಣೆ, ಅಂಬೇಡ್ಕರರ ಸಮಾನತೆ, ಕಬೀರರ ಸೌಹಾರ್ದತೆ, ಬಸವಣ್ಣ-ಕುವೆಂಪು ಅವರ ವಿಶ್ವಮಾನವ ಸಂದೇಶದ ಉತ್ಕೃಷ್ಟ ಸಾಹಿತ್ಯ ವೇಮನರಿಂದ ಸೃಷ್ಟಿಯಾಯಿತು. ವೇಮನರ ಸಾಹಿತ್ಯವು ಜನರ ಮನಸ್ಸಿಗೆ ಪರಿಪೋಷಣೆ, ಸಾಂತ್ವನ, ಪ್ರಸನ್ನತೆಯನ್ನು ತಂದುಕೊಡುತ್ತದೆ ಎಂದು ಹೇಳಿದರು.

ಈ ವೇಳೆ ವೆಂಕಣ್ಣ ಚೌರಡ್ಡಿ, ಈಶಪ್ಪ ಭೂತರೆಡ್ಡಿ, ವೆಂಕಟೇಶ ಪಾಟೀಲ, ಶಂಕರಪ್ಪ ಅಮರಶೆಟ್ಟಿ, ವಿರೂಪಾಕ್ಷಪ್ಪ ಅಮರಶೆಟ್ಟಿ, ಮಂಜುನಾಥ ಗೊರವರ, ಮಹೇಶ ಹಾದಿಮನಿ, ಹನಮಂತಪ್ಪ ದಾನಿ, ಚಂದ್ರಪ್ಪ ಅಮರಶೆಟ್ಟಿ, ಕಂದಾಯ ನಿರೀಕ್ಷಕ ಬಿ.ಎಂ. ಕಾತರಾಳ, ಬಸವರಾಜ ಮಲ್ಲಿಗವಾಡ, ರೇಣುಕಾ ಹರಿಜನ, ಗುರುರಾಜ ಹವಳದ, ಶ್ರೀಕಾಂತ ಕುಲಕರ್ಣಿ, ತಸ್ಲೀಮ ಮುಲ್ಲಾ ಸೇರಿ ಹಲವರಿದ್ದರು.

# ನಾಳೆ ಅಂಬಿಗರ ಚೌಡಯ್ಯ ಜಯಂತಿ



■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಸಂಭಾಪುರ ರಸ್ತೆಯಲ್ಲಿರುವ ಅಂಬಿಗರ ಚೌಡಯ್ಯ ವಿವಿಧೋದ್ದೇಶ ಸೇವಾ ಟ್ರಸ್ಟ್ ಆಶ್ರಯದಲ್ಲಿ ಜ. 21ರಂದು ಬೆಳಗ್ಗೆ 10.30ಕ್ಕೆ ಅಂಬಿಗರ ಚೌಡಯ್ಯ ಜಯಂತಿ ಹಾಗೂ ನೂತನ ಕಚೇರಿ ಉದ್ಘಾಟನೆ ನೆರವೇರಲಿದೆ ಎಂದು ಅಂಬಿಗರ ಚೌಡಯ್ಯ ಜಯಂತ್ಯುತ್ಸವ ಸಮಿತಿ ಅಧ್ಯಕ್ಷ ಬಿ. ಎನ್. ಯರನಾಳ ಹೇಳಿದರು.

ಶುಕ್ರವಾರ ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂಬಿಗರ ಸಮುದಾಯವನ್ನು ಎಸ್ಟಿ ಮೀಸಲಾತಿಗೆ ಸೇರಿಸುವ ಕುರಿತು ಹಲವು ವರ್ಷಗಳಿಂದ ಒತ್ತಾಯ ಮಾಡಲಾಗಿದೆ. ಕಾರ್ಯಕ್ರಮದಲ್ಲಿ ಮತ್ತೊಮ್ಮೆ ಆಗ್ರಹಿಸಲಾಗುವುದು. ಕೇಂದ್ರ ಸರ್ಕಾರ ಆದಷ್ಟು ಬೇಗ ಮೀಸಲಾತಿ ನೀಡಬೇಕು ಎಂದು ಹೇಳಿದರು.

ಕಾನೂನು ಹಾಗೂ ಪ್ರವಾಸೋದ್ಯಮ ಇಲಾಖೆ ಸಚಿವ ಎಚ್.ಕೆ. ಪಾಟೀಲ ಕಾರ್ಯಕ್ರಮ ಉದ್ಘಾಟಿಸುವರು. ಸಾನ್ನಿಧ್ಯವನ್ನು ಶಾಂತಭೀಷ್ಮ ಚೌಡಯ್ಯ ಶ್ರೀಗಳು, ಶಂಕರಾನಂದ ಶ್ರೀಗಳು ವಹಿಸುವರು. ವಿ.ಪ.ಸದಸ್ಯ ಎಸ್.ವಿ. ಸಂಕನೂರು, ಸಭಾಪತಿ ಬಸವರಾಜ ಹೊರಟ್ಟಿ ಇತರರು ಕಾರ್ಯಕ್ರಮದ ವೇದಿಕೆಯಲ್ಲಿ ಇರುವರು ಎಂದರು.

ಸುದ್ದಿಗೋಷ್ಠಿಯಲ್ಲಿ ರಮೇಶ ಯತ್ತಿನ, ಜೆ.ಬಿ. ಧಾರವಾಡ, ಬಿ.ಜಿ. ಬಾರಕೇರ, ಸಿ.ಬಿ. ಬಾರಕೇರ, ಕಾಶಪ್ಪ ಬಳಗಾನೂರ, ಶಿವಾನಂದ ಬನಹಟ್ಟಿ, ಮಾಲತೇಶ ಬಾರ್ಕಿ, ಮಂಜುನಾಥ ಸುಣಗಾರು ಸೇರಿದಂತೆ ಹಲವರು ಇದ್ದರು.

# ಜಿಲ್ಲಾ ಮಟ್ಟದ ವಾಲಿಬಾಲ್ ಪಂದ್ಯದಲ್ಲಿ ತೃತೀಯ



■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ವತಿಯಿಂದ ಸ್ವಾಮಿ ವಿವೇಕಾನಂದರ ಜಯಂತಿ ಅಂಗವಾಗಿ ನಡೆಸಿದ ಜಿಲ್ಲಾ ಮಟ್ಟದ 'ವಿವೇಕ ಟ್ರೋಫಿ–2024' ವಾಲಿಬಾಲ್ ಸ್ಪರ್ಧೆಯಲ್ಲಿ ಇಲ್ಲಿನ ಜಗದ್ಗುರು ತೋಂಟದಾರ್ಯ ವಿದ್ಯಾಪೀಠದ ಬಸವೇಶ್ವರ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯದ ತಂಡ ತೃತೀಯ ಸ್ಥಾನ ಪಡೆದುಕೊಂಡಿದೆ.

ಮಹಾವಿದ್ಯಾಲಯಕ್ಕೆ ಕೀರ್ತಿ ತಂದ ವಿದ್ಯಾರ್ಥಿಗಳಾದ ಗೌತಮ ಎಚ್ ಕಾಂಬ್ಳೇಕರ, ಅರುಣ ಬಿ.ವಾಲ್ಮಿಕಿ, ಭಾಷಾ ಆಯ್. ಕಿಲ್ಲೇದಾರ, ಅಭಿಲಾಷ ಹಿರೇಮಠ, ಸಚಿನ ಅಯ್.ಸಂಗಟಿ, ಗಣೇಶ ಎಸ್.ಭಜಂತ್ರಿ, ಬಸವರಾಜ ಎ.ಬಿ. ಹಾಗೂ ಚಂದ್ರು ಎಚ್. ಕರೆಕಲ್ ಇವರನ್ನು ಜಗದ್ಗುರು ತೋಂಟದಾರ್ಯ ವಿದ್ಯಾಪೀಠದ ಕಾರ್ಯದರ್ಶಿ ಎಸ್.ಎಸ್. ಪಟ್ಟಣಶೆಟ್ಟಿ, ಕಾಲೇಜಿನ ಆಡಳಿತ ಮಂಡಳಿಯ ಸರ್ವ ಸದಸ್ಯರು, ಪ್ರಾ. ಎಂ.ಎಂ. ಬುರಡಿ ಹಾಗೂ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

### ಶ್ರೀ ಅಂಬಾಭವಾನಿ ದೇವಸ್ಥಾನದಲ್ಲಿ ಶ್ರೀ ಲಲಿತಾ ಸಹಸ್ರನಾಮ ಮಹಾಮಂಗಲೋತ್ಸವ

# ಶ್ರೀಚಕ್ರ ಪೂಜೆಯಿಂದ ಸಕಲ ಸಮೃದ್ಧಿ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಶ್ರೀ ಅಂಬಾಭವಾನಿ ದೇವಸ್ಥಾನದಲ್ಲಿ ಗುರುವಾರ ಮತ್ತು ಶುಕ್ರವಾರ ಶ್ರೀಚಕ್ರ ಕುಂಕುಮಾರ್ಚನೆಯ ಸಹಸ್ರನಾಮ ಸಾಂಗತಾ ಯಜ್ಞ ಕಾರ್ಯಕ್ರಮ ಶೃದ್ಧಾ–ಭಕ್ತಿಯಿಂದ ನೆರವೇರಿತು.

ಗುರುವಾರ ದೇವಿ ಮೂರ್ತಿಗೆ ವಿಶೇಷ ಪೂಜೆ, ಚಂಡಿಕಾ ಹೋಮ ನೆರವೇರಿತು. ಶುಕ್ರವಾರ ಶ್ರೀಚಕ್ರ ಹವನದಲ್ಲಿ ಸುಮಂಗಲೆಯರು ಹವಿಸ್ಸು ಅರ್ಪಿಸುವ ಮೂಲಕ ಶ್ರೀ ಲಲಿತಾ ಸಹಸ್ರನಾಮ ಹವನ ಪೂರ್ಣಾಹುತಿಯೊಂದಿಗೆ ಮಹಾ ಮಂಗಲೋತ್ಸವ ನೆರವೇರಿತು.

ಅಂಬಾ ಭವಾನಿ ದೇವಸ್ಥಾನ ಉದ್ಘಾಟನೆಗೊಂಡ ಬಳಿಕ ಕಳೆದ 14 ತಿಂಗಳಿಂದ ಪ್ರತಿ ಮಂಗಳವಾರ ಮತ್ತು ಶುಕ್ರವಾರ ಎಸ್‌ಎಸ್‌ಕೆ ಮತ್ತು ವಿವಿಧ ಸಮಾಜದ ಮಹಿಳೆಯರ ಪಾಲ್ಗೊಳ್ಳುವಿಕೆಯೊಂದಿಗೆ ಶ್ರೀಚಕ್ರ ಕುಂಕುಮಾರ್ಚನೆ ಪೂಜೆ ನೆರವೇರಿಸುತ್ತಾ ಬರಲಾಗಿದೆ. ಇಲ್ಲಿಯವರೆಗೂ 36 ಲಕ್ಷ ಶ್ರೀಲಲಿತಾ ಸಹಸ್ರನಾಮಾವಳಿ ಕುಂಕುಮಾರ್ಚನೆ ನಡೆಸಲಾಗಿದ್ದು, ಇದರ ಅಂಗವಾಗಿ ಈ ಸಾಂಗತಾ ಯಜ್ಞ (ಮಹಾಮಂಗಲ)ದ ಕಾರ್ಯಕ್ರಮ ನೆರವೇರಿತು. ವೈದಿಕರಾದ ವೇ.ಮೂ. ಬಾಲಚಂದ್ರಭಟ್ ಹುಲಮನಿ ಅವರ ನೇತೃತ್ವದಲ್ಲಿ ಋತ್ವಿಜರ



ವೇದಘೋಷಗಳಿಂದ ಯಶಸ್ವಿಯಾಗಿ ನೆರವೇರಿತು. ಕುಂಕುಮಾರ್ಚನೆ ಪೂಜೆಯಲ್ಲಿ ನಿರಂತರವಾಗಿ ಪಾಲ್ಗೊಂಡ ಸುಮಂಗಲೆಯರಿಗೆ ಶ್ರೀಚಕ್ರ ವಿತರಿಸಲಾಯಿತು.

ಈ ವೇಳೆ ಮಾತನಾಡಿದ ಪಂ. ಬಾಲಚಂದ್ರಭಟ್ ಹುಲಮನಿ, ಲಕ್ಷ್ಮೀ ಸಹಸ್ರನಾಮ ಸ್ತೋತ್ರ ಜಪಿಸುವುದರಿಂದ ಲಕ್ಷ್ಮೀದೇವಿ ಶಾಶ್ವತವಾಗಿ ನೆಲೆಯೂರುತ್ತಾಳೆ. ಲಕ್ಷ್ಮೀದೇವಿ ಸಮೃದ್ಧಿ, ಸಂತೋಷ, ಜ್ಞಾನೋದಯ, ಬುದ್ಧಿವಂತಿಕೆ, ಪ್ರೀತಿ ಮತ್ತು ಸಂಪತ್ತಿನ ದೇವತೆಯಾಗಿದ್ದಾಳೆ. ಶ್ರೀಚಕ್ರ ಪೂಜೆ ಅತ್ಯಂತ ಫಲದಾಯಕ. ಯಾರ ಮನೆಯಲ್ಲಿ ನಿತ್ಯ ಶ್ರೀಚಕ್ರ ಪೂಜೆ ನಡೆಯುತ್ತದೆಯೋ ಅಲ್ಲಿ ಸಾಕ್ಷಾತ್ ಪರಮೇಶ್ವರಿದೇವಿ ಶಾಂತಿ ಸ್ವರೂಪಿಣಿಯಾಗಿ, ಐಶ್ವರ್ಯ ಲಕ್ಷ್ಮೀಯಾಗಿ ನೆಲೆಸಿರುತ್ತಾಳೆ. ಶ್ರೀಅಂಬಾಭವಾನಿ ದೇವಿಯ ಸ್ಥಾನದಲ್ಲಿ ಈ ವಿಶೇಷ ಪೂಜೆ ನಡೆದಿರುವದು ಶ್ರೇಷ್ಠ ಕಾರ್ಯವಾಗಿದೆ. ದೇವಸ್ಥಾನದಲ್ಲಿ ಇಂತಹ ಧಾರ್ಮಿಕ ಕಾರ್ಯ ಚಟುವಟಿಕೆಗಳು ನಿರಂತರವಾಗಿ ನಡೆಯಲಿ ಎಂದು ನುಡಿದರು.

> ಎಸ್‌ಎಸ್‌ಕೆ ಸಮಾಜದ ಉಪಾಧ್ಯಕ್ಷ ನಾರಾಯಣಸಾ ಪವಾರ ಮಾತನಾಡಿ, ಎಸ್‌ಎಸ್‌ಕೆ ಸಮಾಜ ಬಾಂಧವರ ಮತ್ತು ಎಲ್ಲ ಸಮಾಜಗಳ ಸಹಕಾರದಿಂದ ದೇವಸ್ಥಾನ ನಿರ್ಮಾಣದ ಜತೆಗೆ ನಿರಂತರ ಧಾರ್ಮಿಕ ಕಾರ್ಯಕ್ರಮ ನಡೆಯುತ್ತಿದೆ. ಈ ಎಲ್ಲಾ ಕಾರ್ಯಗಳಿಗೂ ಶ್ರೀ ಅಂಬಾಭವಾನಿ ಮಾತೆಯ ಕೃಪಾಶೀರ್ವಾದ ಪ್ರೇರಣೆಯಾಗಿದೆ ಎಂದರು.

ಈ ಸಂದರ್ಭದಲ್ಲಿ ದೇವಸ್ಥಾನ ಕಮಿಟಿ ಉಪಾಧ್ಯಕ್ಷ ನಾರಾಯಣಸಾ ಪವಾರ, ಲಕ್ಷ್ಮಣಸಾ ರಾಜೋಳಿ, ತುಕಾರಾಮಸಾ ಬದಿ, ಆನಂದಸಾ ಬದಿ, ಯಲ್ಲಪ್ಪ ಬದಿ, ತಿಪ್ಪಣ್ಣಸಾ ಬದಿ, ಛಾಯಾಸಾ ಬದಿ, ಗಣಪತಸಾ ಪೂಜಾರಿ, ತರುಣ ಸಂಘದ ಅಧ್ಯಕ್ಷ ಭರತ ಬಾಕಳೆ, ಕಿರಣ ಬದಿ, ಮಂಜುನಾಥ ಬದಿ, ಗಣೇಶ ಬದಿ, ಮನೋಹರಸಾ ಬಸವಾ, ರಂಗನಾಥ ಬದಿ, ಪರಶುರಾಮ ಮೆಹರವಾಡೆ, ವಿನಾಯಕ ರಾಜೋಳಿ, ಶಾಂತಾಬಾಯಿ ಪವಾರ, ಸರೋಜಾ ಬದಿ, ಅಕ್ಷತಾ ಬಸವಾ, ಲೀನಾಬಾಯಿ ಬಾಕಳೆ, ಅಕ್ಕಮ್ಮ ಬದಿ, ರೂಪಾ ರಾಜೋಜಿ, ಸುನಂದಾ ಮೆಹರವಾಡೆ ಸೇರಿದಂತೆ ಎಸ್‌ಎಸ್‌ಕೆ ಸಮಾಜದ ಹಿರಿಯರು, ಮಹಿಳೆಯರು, ಯುವಕರು, ಸಾರ್ವಜನಿಕರು ಹಾಗೂ ಎಸ್‌ಎಸ್‌ಕೆ ಮಹಿಳಾ ಸಂಘ, ತರುಣ ಸಂಘದ ಸದಸ್ಯರು ಉಪಸ್ಥಿತರಿದ್ದರು.

# ಮುಕ್ತ ವಿಶ್ವವಿದ್ಯಾಲಯದಲ್ಲಿ ವಿವಿಧ ಕೋರ್ಸುಗಳ ಪ್ರವೇಶ ಆರಂಭ

■ವಿಜಯಸಾಕ್ಷಿ ಸುದ್ದಿ, ಗದಗ

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು ಪ್ರಸ್ತಕ 2023–24 (ಜನವರಿ ಆವೃತಿ) ಶೈಕ್ಷಣಿಕ ಸಾಲಿಗೆ ಪ್ರವೇಶ ಪ್ರಕ್ರಿಯೆ ಆರಂಭಿಸಿದ್ದು, ಸ್ನಾತಕ/ಸ್ನಾತಕೋತರ ಕೋರ್ಸುಗಳಾದ ಬಿ.ಎ, ಬಿ.ಕಾಂ, ಬಿ.ಲಿಬ್, ಬಿ.ಬಿ.ಎ, ಬಿ.ಎಸ್.ಡಬ್ಲ್ಯೂ ಹಾಗೆಯೇ ಎಂ.ಎ, ಪತ್ರಿಕೋದ್ಯಮ, ಸ್ನಾತಕೋತರ ಪದವಿಗಳಾದ ಎಂ.ಕಾಂ, ಎಂ.ಬಿ.ಎ, ಎಂ.ಲಿಬ್, ಎಂ.ಎಸ್ಸಿ, ಎಂ.ಸಿ.ಎ, ಎಂ.ಎಸ್. ಡಬ್ಲ್ಯೂ ಹಾಗೂ ಡಿಪ್ಲೋಮಾ ಮತ್ತು –ಸರ್ಟಿಫಿಕೇಟ್ ಕೋರ್ಸ್‌ಗಳ ಪ್ರವೇಶ ಪ್ರಕ್ರಿಯೆ ಜನವರಿ 8 ರಿಂದ ಪ್ರಾರಂಭವಾಗಿ ಮಾರ್ಚ್ 31 ರಂದು ಮುಕ್ತಯಗೊಳ್ಳುತ್ತದೆ, ಅರ್ಜಿಗಳನ್ನು www.ksoumysuru.ac.in ನಲ್ಲಿ KSOU Admission portal ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಭರ್ತಿ ಮಾಡಿ ಪ್ರಾದೇಶಿಕ ಕೇಂದ್ರಕ್ಕೆ ಖುದ್ದಾಗಿ ಭೇಟಿ ನೀಡಿ ಆನ್ ಲೈನ್ ಮೂಲಕ ಪ್ರವೇಶಾತಿ ಶುಲ್ಕ ಪಾವತಿಸಿ ಪ್ರವೇಶ ಪಡೆಯಲು ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಪ್ರಾದೇಶಿಕ ನಿರ್ದೇಶಕರು, ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾಲಯಲ, ರೈತ ಭವನ, ಜನರಲ್ ಕಾರಿಯಪ್ಪ ವೃತ್ತ, ಗದಗ–582118 ಹಾಗೂ ದೂರವಾಣಿ ಸಂಖ್ಯೆ– 8884231002 ಮತ್ತು 8618929376 ನ್ನು ಸಂಪರ್ಕಿಸಬಹುದು.




VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka